ನವೆಂಬರ್ ೨೦೨೫

# ಆರ್ಬಿಟ್,ಹುಮನಾಬಾದ

ಸಮಾಜ ಸೇವಾ ಸಂಸ್ಥೆ, ಎನ್.ಎಚ್. ೬೫ ರೈಲ್ವೇ ನಿಲ್ದಾಣದ ಹತ್ತಿರ ಹುಮ್ನಾಬಾದ ತಾಲೂಕು, ಬೀದರ್ ಜಿಲ್ಲೆ, ಕರ್ನಾಟಕ, 585330

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

ಸಮಾಜ ಸೇವಾ ಸಂಸ್ಥೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಕೇಂದ್ರೀಯ ವಿದ್ಯಾಲಯ ಹತ್ತಿರ, ಕೋಟ್ನೂರ (ಡಿ) ಜೇವರ್ಗಿ ರಸ್ತೆ ಕಲಬುರಗಿ

# ಸೇವಾವಾಣಿ

## ಸಮಾಜದ ಹಿತಕ್ಕೆ ಸಮರ್ಪಿತ ಸೇವೆ





ಡಾ॥ ರಾಬರ್ಟ್ ಮೈಕಲ್ ಮಿರಂಡ
ಧರ್ಮಾಧ್ಯಕ್ಷರು, ಹಾಗೂ ಅಧ್ಯಕ್ಷರು
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ



ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ

## "ಆರ್ಬಿಟ್ ಸಂಸ್ಥೆಯಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ"

ಹುಮ್ನಾಬಾದ್: 13 ಅಕ್ಟೋಬರ್ 2025ರಂದು ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೀದರ್, ತಾಲೂಕ ಪಂಚಾಯತ್ ಹೂಮನಾಬಾದ್, ವಿಶೇಷ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಜಂಟಿ ಸಂಯುಕ್ತಾಶ್ರಯದಲ್ಲಿ "ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ" ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾರ್ಯಕ್ರಮದ ವಿಶೇಷ ಅತಿಥಿಗಳಾಗಿ ಹಿರಿಯ ಸಿವಿಲ್ ನ್ಯಾಯಾಧೀಶರು ಶ್ರೀ ಪ್ರಶಾಂತ್ ಬಾದವಡಗಿ ರವರು ಭಾಗವಹಿಸಿ, ಪ್ರತಿಯೊಬ್ಬ ವ್ಯಕ್ತಿಗೆ ಘನತೆಯಿಂದ ಬದುಕುವ ಅಧಿಕಾರವಿದೆ ಸಂವಿಧಾನವು ನಮಗೆ ಹಲವಾರು ಹಕ್ಕುಗಳನ್ನು ನೀಡಿದೆ. ಇಂದು ವ್ಯಕ್ತಿ ತನ್ನ ಜೀವನ ಶೈಲಿಯಿಂದಾಗಿ ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾನೆ. ಪ್ರತಿಯೊಬ್ಬರು ಮಾನಸಿಕ ಆರೋಗ್ಯದ ಕಡೆ ಹೆಚ್ಚಿನ ಗಮನ ನೀಡಬೇಕು. ತಜ್ಞ ಮನೋವೈದ್ಯರ ಮಾರ್ಗದರ್ಶನದಂತೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ಆರ್ಬಿಟ್ ಸಂಸ್ಥೆಯು ನಮ್ಮ ಭಾಗದಲ್ಲಿ ಉತ್ತಮ ಕಾರ್ಯ ನಿರ್ವಹಿಸುತ್ತಿದೆ ಎಂದು ಸಂಸ್ಥೆಯ ಕುರಿತು ಹಿತ ನುಡಿಗಳನ್ನು ನುಡಿದರು. ತಜ್ಞಮನೋವೈದ್ಯರಾದ ಡಾ. ರಿತೇಶ್ ಸೂತ್ರವೇ ರವರು "ಮಾನಸಿಕ ಆರೋಗ್ಯದ ಮಹತ್ವ ಮತ್ತು ಅದನ್ನು ಕಾಪಾಡಿಕೊಳ್ಳುವ ಮಾರ್ಗಗಳು" ಕುರಿತು ಉಪನ್ಯಾಸ ನೀಡಿದರು. ಅವರು ತಮ್ಮ ಮಾತಿನಲ್ಲಿ ಜೀವನದ ಒತ್ತಡಗಳು, ಆತಂಕ, ಸಾಮಾಜಿಕ ಪರಿಣಾಮಗಳನ್ನು ವಿವರಿಸಿ, ಧ್ಯಾನ, ವ್ಯಾಯಾಮ ಮತ್ತು ಸಕಾರಾತ್ಮಕ ಚಿಂತನೆಗಳ ಮಹತ್ವವನ್ನು ವಿವರಿಸಿದರು. ಹುಮ್ನಾಬಾದ್ ಪೊಲೀಸ್ ಠಾಣೆಯ ಸಬ್ ಇನ್ಸ್ಪೆಕ್ಟರ್ ಸುರೇಶ್ ಕುಮಾರ್ ಚೌಹಾಣ ಮಾತನಾಡಿ ಮಾನಸಿಕ ಆರೋಗ್ಯದ ಕುರಿತು ಕಾನೂನಿನಡಿಯಲ್ಲಿ ಇರುವ ಅವಕಾಶಗಳ ಕುರಿತು ವಿವರಿಸಿದರು. ಹಾಗೂ ವೈದ್ಯರಾದ ಡಾ. ಮುಸ್ತಫ ರವರು ಉಪಸ್ಥಿತರಿದ್ದು, ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ ಶುಭ ಕೋರಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಫಾದರ್ ವಿಕ್ಟರ್ ವಾಸ್ ರವರು ವಹಿಸಿಕೊಂಡು, ಪ್ರತಿಯೊಬ್ಬರೂ ಮಾನಸಿಕವಾಗಿ ಬಲಿಷ್ಠರಾಗಲು ಸಹಾನುಭೂತಿ, ಪ್ರೋತ್ಸಾಹ ಮತ್ತು ಪರಸ್ಪರ ಬೆಂಬಲದ ಮನೋಭಾವವನ್ನು ಬೆಳೆಸಿಕೊಳ್ಳಬೇಕು, ಈ ನಿಟ್ಟಿನಲ್ಲಿ ಹಲವಾರು ಇಲಾಖೆಗಳು ಸಂಸ್ಥೆಯ ಕಾರ್ಯಕ್ಕೆ ಬೆಂಬಲವನ್ನು ನೀಡಿ ಬೆಳೆಸಿವೆ ಎಂದು ಹೇಳಿದರು. ಶ್ರೀ ಮಂಜುನಾಥ ರೆಡ್ಡಿ ತಾಲೂಕು ವಕೀಲರ ಸಂಘದ ಅಧ್ಯಕ್ಷರು, ಶ್ರೀ ವಿಜಯಕುಮಾರ್ ಜ್ಯೋತಿಗೊಂಡ ತಾಲೂಕು ವಕೀಲರ ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದ ಸಿಬ್ಬಂದಿ ವರ್ಗದವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಆರ್ಬಿಟ್ ಸಂಸ್ಥೆಯ ಸಿಬ್ಬಂದಿಗಳು, ಫಲಾನುಭವಿಗಳು ಹಾಗೂ ಪೋಷಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.







ಮಾನವೀಯತೆಯ ಸೇವೆ,
ಉತ್ತಮ ನಾಳೆಯ ನಿರ್ಮಾಣ.

# "ನವಜೀವನ (ಎ.ಪಿ.ಐಫ್) ಕಾರ್ಯಕ್ರಮ"

## "ಮಾನಸಿಕ ಅಸ್ವಸ್ಥರಿಗಾಗಿ ಎರಡು ದಿನದ ವಸತಿ ಸಹಿತ ಶಿಬಿರ"



10 ಅಕ್ಟೋಬರ್ 2025 ರಂದು ಹುಮ್ನಾಬಾದ್ ನಗರದ ಆರ್ಬಿಟ್ ಸಂಸ್ಥೆಯಲ್ಲಿ, ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಹಕಾರದೊಂದಿಗೆ ಮಾನಸಿಕ ಅಸ್ವಸ್ಥರಿಗಾಗಿ ಎರಡು ದಿನದ ವಸತಿ ಸಹಿತ ಶಿಬಿರವನ್ನು ಆಯೋಜಿಸಲಾಯಿತು. ಶಿಬಿರವನ್ನು ಉದ್ದೇಶಿಸಿ ಮಾತನಾಡಿದ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಒಂದನೆಯ ಫಾದರ್ ಆಲ್ಬರ್ಟ್ ಅವರು, ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯವು ಅತಿ ಮುಖ್ಯವಾದದ್ದು, ಪ್ರತಿಯೊಬ್ಬರು ಮಾನಸಿಕ ಆರೋಗ್ಯದ ಕಡೆ ಹೆಚ್ಚಿನ ಗಮನವಹಿಸಿ ಧನಾತ್ಮಕವಾಗಿ ಜೀವನದಲ್ಲಿ ಬದುಕುವಂತೆ ಸಲಹೆ ನೀಡಿದರು. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀ ಅರುಣ್ ಕುಮಾರ್ ಕೋಟೆ ಅವರು ಮಾನಸಿಕ ಕಾಯಿಲೆಯುಳ್ಳ ಫಲಾನುಭವಿಗಳಿಗೆ ತಮ್ಮ ಜೀವನದಲ್ಲಿ ಚಟುವಟಿಕೆ ಯಾವ ಕ್ರಮ ಅನುಸರಿಸಬೇಕು ಹಾಗೂ ಸೂಕ್ತ ಹಾಗೂ ಉತ್ತಮ ಚಿಕಿತ್ಸೆ ಪಡೆದುಕೊಂಡು ಮಾನಸಿಕ ಕಾಯಿಲೆಯಿಂದ ಹೇಗೆ ಗುಣಮುಖರಾಗಬಹುದು ಎಂಬುದಾಗಿ ಉಪನ್ಯಾಸ ನೀಡಿದರು. ಸಹ ಆಪ್ತ ಸಮಾಲೋಚಕರಾದ ಶ್ರೀ ರವಿ ಅವರು ಶಿಬಿರಾರ್ಥಿಗಳಿಗೆ ವಿವಿಧ ಚಟುವಟಿಕೆಗಳನ್ನು ಮಾಡಿಸುವ ಮೂಲಕ ಪುನಶ್ಚೇತನವನ್ನು ಮೂಡಿಸಿದರು. ಈ ಸಂದರ್ಭದಲ್ಲಿ ಕಾರ್ಯಕ್ರಮದ ವ್ಯವಸ್ಥಾಪಕರಾದ ಶ್ರೀ ಸದಾನಂದ, ಸಂಯೋಜಕರಾದ ಶ್ರೀ ಪ್ರವೀಣ್, ಕಾರ್ಯಕ್ರಮದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಶಿಬಿರದಲ್ಲಿ ಫಲಾನುಭವಿಗಳು ಹಾಗೂ ಪೋಷಕರು ಸೇರಿ ಒಟ್ಟು 35 ಜನ ಭಾಗವಹಿಸಿ ಶಿಬಿರದ ಸದುಪಯೋಗವನ್ನು ಪಡೆದುರು.

## "ಮಾನಸಿಕ ಅಸ್ವಸ್ಥರ ದಿನಾಚರಣೆ"



14 ಅಕ್ಟೋಬರ್ 2025 ರಂದು ಹುಮ್ನಾಬಾದ್ ತಾಲೂಕಿನ ಮುಸ್ತಪುರ್ ಗ್ರಾಮದ ಅಂಗನವಾಡಿಯಲ್ಲಿ ಬೆಳಿಗ್ಗೆ 11 ಗಂಟೆಗೆ ಮಾನಸಿಕ ಅಸ್ವಸ್ಥರ ದಿನಾಚರಣೆ ಆಚರಿಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ದಿಲೀಪ್ ಸರ್ ಸಿಎಚ್ಓ ಮತ್ತು ಪಿಎಚ್‌ಸಿಓ ಶ್ರೀಮತಿ ಜೈಶ್ರೀ ಮತ್ತು ಆಶಾ ಕಾರ್ಯಕರ್ತೆಯಾದ ಶ್ರೀಮತಿ ಆಶಾರಾಣಿ, ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಮಹಾದೇವಿ ಉಪಸ್ಥಿತರಿದ್ದರು. ಶ್ರೀ ದಿಲೀಪ್ ಸರ್ ಅವರು ಮಾನಸಿಕ ಅಸ್ವಸ್ಥರ ದಿನಾಚರಣೆ ಬಗ್ಗೆ ಮಾತನಾಡಿದರು. ಈ ಕಾರ್ಯಕ್ರಮವು ವಿಶ್ವಾದ್ಯಂತ ಆಚರಿಸುತ್ತಾರೆ ಇದರ ಮಹತ್ವ ಮಾನಸಿಕ ಅಸ್ವಸ್ಥರು ಉತ್ತಮ ಚಿಕಿತ್ಸೆ ಹಾಗು ಸೇವೆ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ. ಎಲ್ಲಾದರೂ ಮಾನಸಿಕ ಅಸ್ವಸ್ಥರು ನೀವು ಕಂಡಿದ್ದಲ್ಲಿ ಅವರಿಗೆ ನೀವು ಸಹಾಯ ಮಾಡಿರಿ. ಅವರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಔಷಧಿ ಸಿಗುತ್ತದೆ ಮತ್ತು ತಪಾಸಣೆ ಉಚಿತವಾಗಿ ಇರುತ್ತದೆ ನಿಮ್ಮಿಂದ ಸಹಾಯವಾಗಲೆಂದು ಗ್ರಾಮಸ್ಥರಿಗೆ ಮಾಹಿತಿ ನೀಡಿದರು.

## "ಸಮುದಾಯ ಶಕ್ತಿ ತಾಲೂಕ ಒಕ್ಕೂಟ ಸಭೆ"



15 ಅಕ್ಟೋಬರ್ 2025 ರಂದು ಹುಮ್ನಾಬಾದ್ ತಾಲೂಕಿನ ಆರ್ಬಿಟ್ ಸಂಸ್ಥೆಯಲ್ಲಿ ಬೆಳಿಗ್ಗೆ 11:30ಕ್ಕೆ ಸಮುದಾಯ ಶಕ್ತಿ ತಾಲೂಕ ಒಕ್ಕೂಟ ಸಭೆಯು ಸರಿಯಾಗಿ ಸಮಯಕ್ಕೆ ಆರಂಭಿಸಲಾಯಿತು. ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಪ್ತಸಮಾಲೋಚಕರಾದ ಶ್ರೀ ಅರುಣ್ ಕೋಟೆಯವರು ಭಾಗವಹಿಸಿದ್ದರು ಸಮುದಾಯ ಶಕ್ತಿ ತಾಲೂಕು ಒಕ್ಕೂಟ ಸದಸ್ಯರು ಸರಿಯಾದ ಸಮಯಕ್ಕೆ ಭಾಗವಹಿಸಿದ್ದರು. ಈ ಒಕ್ಕೂಟ ಸಭೆಯಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ರವಿ ಸಹ ಆಪ್ತಸಮಾಲೋಚಕರು ಮತ್ತು ಸ್ಥಳೀಯ ಸಂಯೋಜಕರಾದ ಶ್ರೀ ಪ್ರವೀಣ್ ಮತ್ತು ಕಾರ್ಯಕರ್ತೆಯಾದ ಶ್ರೀಮತಿ ಮಹಾದೇವಿ ಉಪಸ್ಥಿತರಿದ್ದರು. ಸಭೆಯಲ್ಲಿ ಚರ್ಚೆ ಮಾಡಿ ಅಧಿಕಾರಿಯೊಂದಿಗೆ ಜಾಲಬಂಧ. ಗ್ರಾಮ ಪಂಚಾಯತಿಯಲ್ಲಿ ಸಿಗುವ 5% ಬಗ್ಗೆ ಮಾಹಿತಿ ನೀಡಲಾಯಿತು. ಯು.ಡಿ.ಐ.ಡಿ ಕಾರ್ಡ್ ಅರ್ಜಿ ಬಗ್ಗೆ ಮತ್ತು ಐಡಿ ಕಾರ್ಡ್ ಹೇಗೆ ಪಡೆದುಕೊಳ್ಳಬೇಕೆಂದು ಮಾಹಿತಿ ನೀಡಲಾಯಿತು ಹಾಗೂ ಎಲ್ಲಾದರೂ ಮಾನಸಿಕ ಅಸ್ವಸ್ಥರನ್ನು ಕಂಡಿದ್ದಲ್ಲಿ ಅವರಿಗೆ ಉಚಿತವಾಗಿ ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಔಷಧಿ ಇದೆ ಅದಕ್ಕಾಗಿ ನೀವು ಅವರನ್ನು ಸಹಾಯ ಮಾಡಿರೆಂದು ಮಾಹಿತಿ ತಿಳಿಸಲಾಯಿತು. ಸಮುದಾಯ ಶಕ್ತಿ ಸಮಯಕ್ಕೆ ಸರಿಯಾಗಿ ತಪ್ಪದೇ ಬರಲು ತಿಳಿಸಿದರು.



## “ತಾಲೂಕ ಆಸ್ಪತ್ರೆಯಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ”



ಚಿಟಗುಪ್ಪ ಪಟ್ಟಣದ ತಾಲೂಕ ಸರ್ಕಾರಿ ಆಸ್ಪತ್ರೆಯಲ್ಲಿ ದಿನಾಂಕ 16 ಅಕ್ಟೋಬರ್ 2025ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಹಾಗೂ ಚಿಡುಗುಪ್ಪ ತಾಲೂಕ ಆಸ್ಪತ್ರೆಯ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಆಚರಿಸಲಾಯಿತು. ಚಿಟಗುಪ್ಪ ತಾಲೂಕ ಸರ್ಕಾರಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳಾದ ಡಾಕ್ಟರ್ ವಿಜಯಕುಮಾರ್ ಕಿರಾಸ್ಕರ್ ಮಾತನಾಡಿ, ಮಾನಸಿಕ ಆರೋಗ್ಯ ಪ್ರತಿಯೊಬ್ಬರ ಮೂಲಭೂತ ಹಕ್ಕಾಗಿದೆ, ಹಲವಾರು ಜನರು ಮಾನಸಿಕ ಕಾಯಿಲೆಯನ್ನು ಭೂತ ಚೇಷ್ಟೆ, ಮಾಟ ಮಂತ್ರ, ಮೂಢನಂಬಿಕೆಯ ಆಧಾರದ ಮೇಲೆ ಯೋಚಿಸುತ್ತಾರೆ ಸಾಮಾನ್ಯ ಕಾಯಿಲೆಗಳಂತೆ ಮಾನಸಿಕ ಕಾಯಿಲೆಗೆ ಸೂಕ್ತ ಹಾಗೂ ಪರಿಣಾಮಕಾರಿ ಚಿಕಿತ್ಸೆ ಮನೋಭಾವನೆಯನ್ನು ಬೆಳೆಸುವ ಮೂಲಕ ಸೂಕ್ತ ಚಿಕಿತ್ಸೆಗೆ ಮುಂದಾಗಬೇಕು. ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುವ ವ್ಯಕ್ತಿಗಳನ್ನು ಕಂಡು ಭೇದ ಭಾವ ಮಾಡದೆ ಮಾನವೀಯತೆ ಆಧಾರದ ಮೇಲೆ ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಕರೆ ನೀಡಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ ಗಾಂಧಿನಗರ್ ಕೇಂದ್ರದ ನಿರ್ದೇಶಕರಾದ ವಂದನಿಯ ಫಾದರ್ ಜಾರ್ಜ್ ಆರೋಗ್ಯವೇ ಭಾಗ್ಯ ಎಂದು ಹೇಳುತ್ತಾ ಇಂದು ಸಮುದಾಯದಲ್ಲಿ ಮಾನಸಿಕ ಒತ್ತಡ ಎನ್ನುವುದು ಅತಿಯಾಗಿ ಕಂಡುಬರುತ್ತದೆ ಯುವಕರು ಹೆಚ್ಚಿನ ರೀತಿಯಲ್ಲಿ ಮಾನಸಿಕ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಅಂತ ಯೋಚನೆಗಳಿಗೆ ಮುಂದಾಗುತ್ತಿರುವುದು ದುರಂತ ಸಂಗತಿ. ಆಧುನಿಕ ಜೀವನ ಶೈಲಿಯಿಂದಾಗಿ ಮನುಷ್ಯನನ್ನು ಸ್ವಯಂಕೃತವಾಗಿ ತನ್ನ ಜೀವನವನ್ನು ಒತ್ತಡಕ್ಕೆ ತಳ್ಳಿಕೊಂಡಿದ್ದಾನೆ. ಆದರೆ ಒತ್ತಡವನ್ನು ನಿಭಾಯಿಸಿಕೊಳ್ಳುವ ತಂತ್ರಗಳು ಕಲಿತುಕೊಳ್ಳುವುದು ತುಂಬಾ ಅವಶ್ಯಕವಾಗಿದೆ, ಈ ನಿಟ್ಟಿನಲ್ಲಿ ಆರ್ಬಿಟ್ ಸಂಸ್ಥೆಯು ನಮ್ಮ ಭಾಗದಲ್ಲಿ ಮಾನಸಿಕ ಆರೋಗ್ಯ ಕುರಿತು ಅರಿವು ಮೂಡಿಸುವಂಥ ಮಹತ್ವದ ಕಾರ್ಯ ಮಾಡುತ್ತಿದೆ. ಪ್ರತಿಯೊಬ್ಬರು ಮಾನಸಿಕ ಆರೋಗ್ಯದ ಕುರಿತು ಅರಿವು ಹೊಂದುವುದು ಅತ್ಯ ಅವಶ್ಯಕತೆ ಎಂದು ತಮ್ಮ ಹಿತುನುಡಿಯನ್ನು ನುಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 150 ಜನರು ಭಾಗವಹಿಸಿದ್ದರು. ನವಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## “ಸೀಮಿ ನಾಗಣ್ಣ ವಿಶೇಷ ವಿಕಲಚೇತನರ ಸಂಘದ ಸಭೆ”



23 ಅಕ್ಟೋಬರ್ 2025 ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ್ ಬಿ ಪಟ್ಟಣದಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಗಣೇಶ್ ಕಟ್ಟೆಯಲ್ಲಿ ಸೀಮಿ ನಾಗಣ್ಣ ವಿಶೇಷ ವಿಕಲಚೇತನರ ಸಂಘದ ಸಭೆ ಸೇರಲಾಯಿತು. ಈ ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಡೇವಿಡ್ ಅವರು ಸಂಘದ ಸಭೆಯಲ್ಲಿ ಭಾಗವಹಿಸಿದ ಸಭಿಕರಿಗೆ ಈ ಕಾರ್ಯಕ್ರಮವು ಸಮುದಾಯಕ್ಕೆ ವರ್ಗಾವಣೆ ಆದ ನಂತರ ಯಾವ ರೀತಿಯಾಗಿ ಜವಾಬ್ದಾರಿಯಿಂದ ನಡೆಸಿಕೊಂಡು ಹೋಗಬೇಕು ಎಂಬುದರ ಕುರಿತು ಸ್ಪಷ್ಟವಾದ ಮಾಹಿತಿಯನ್ನು ನೀಡಿದರು, ಸಂಘದ ಅಧ್ಯಕ್ಷರು, ಆಶಾ ಕಾರ್ಯಕರ್ತರು, ಸಮಾಜ ಸೇವಕರು ಇವರೆಲ್ಲರೂ ಸೇರಿಕೊಂಡು ಸಮಾಜದ ಒಳತಿಗಾಗಿ ದುಡಿಯಬೇಕು, ಆರೋಗ್ಯವಂತವಾದ ಸಮಾಜವನ್ನು ಕಟ್ಟಲು, ತಮ್ಮೆಲ್ಲರ ಸಹಾಯ ಮತ್ತು ಸೇವಾ ಮನೋಭಾವನೆ ತುಂಬಾ ಮುಖ್ಯವಾದದ್ದು, ಈಗಾಗಲೇ ತಮಗೆ ಪ್ರತಿ ತಿಂಗಳು ಸಂಘಗಳಲ್ಲಿ ನೀಡಿರುವ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಡಿಎಂಎಚ್ಪಿ ಕ್ಯಾಂಪ್, ಇಲಾಖೆಗಳ ಭೇಟಿ,ಹಾಗೂ ಅಧಿಕಾರಿಗಳೊಂದಿಗೆ ಉತ್ತಮ ಸ್ನೇಹ ಭಾವವನ್ನು ಬೆಳೆಸಿಕೊಂಡು, ತಮ್ಮ ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಹೋಗಬೇಕೆಂದು ಸಂಘದ ಸದಸ್ಯರಿಗೆ ಮಾಹಿತಿಯನ್ನು ಮನವರಿಕೆ ಮಾಡಿಕೊಡಲಾಯಿತು.

## “ಮಾನಸಿಕ ಅಸ್ವಸ್ಥರ ಪೋಷಕರ ಸಭೆ”



08 ಅಕ್ಟೋಬರ್ 2025ರಂದು ಹುಮನಾಬಾದ್ ತಾಲೂಕಿನ ಘಾಟಬೋರಾಳ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಪೋಷಕರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಸಭೆಗೆ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಪ್ರವೀಣ್ ಅವರು ಪೋಷಕರಿಗೆ ಮಾನಸಿಕ ಅಸ್ವಸ್ಥರ ಆರೈಕೆ, ಔಷಧ ಸೇವನೆ, ಮನೋವೈಜ್ಞಾನಿಕ ಸಹಾಯ ಮತ್ತು ಸಾಮಾಜಿಕ ಬೆಂಬಲದ ಮಹತ್ವ ಕುರಿತು ಜಾಗೃತಿ ನೀಡಲಾಯಿತು. ಸಭೆಯಲ್ಲಿ ಪೋಷಕರು ತಮ್ಮಅನುಭವಗಳನ್ನು ಹಂಚಿಕೊಂಡರು ಹಾಗೂ ತಮ್ಮ ಮಕ್ಕಳ ಪ್ರಗತಿ ಮತ್ತು ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದರು. ಪೋಷಕರಿಗೆ ಸೂಕ್ತ ಮಾರ್ಗದರ್ಶನ ನೀಡಿ ವಕಾಲತ್ತು ಮತ್ತು ಲಾಬಿ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಮಾನಸಿಕ ಅಸ್ವಸ್ಥರ ಹಕ್ಕುಗಳು, ಸರ್ಕಾರಿ ಯೋಜನೆಗಳ ಪ್ರಯೋಜನ ಪಡೆಯುವ ವಿಧಾನ, ಸಮಾಜದಲ್ಲಿ ಅವರ ಹಕ್ಕುಗಳಿಗೆ ಬೆಂಬಲ ನೀಡುವ ಅಗತ್ಯತೆ ಇತ್ಯಾದಿ ವಿಷಯಗಳ ಕುರಿತು ಚರ್ಚೆ ನಡೆಯಿತು. ಪೋಷಕರಿಗೆ ತಮ್ಮ ಮಕ್ಕಳ ಪರವಾಗಿ ಹೇಗೆ ವಕಾಲತ್ತು ಮಾಡಬಹುದು ಹಾಗೂ ಸರ್ಕಾರಿ ಇಲಾಖೆಗಳ ಜೊತೆ ಹೇಗೆ ಸಂಪರ್ಕ ಸಾಧಿಸಬಹುದು ಎಂಬುದರ ಬಗ್ಗೆ ಮಾಹಿತಿಯನ್ನು ನೀಡಲಾಯಿತು.

## “ನವಜೀವನ ಮಾನಸಿಕ ಆರೋಗ್ಯ ಕಾರ್ಯಕ್ರಮ”ಆಪ್ತ ಸಮಾಲೋಚನ ವಿಭಾಗ”



ಆಪ್ತ ಸಮಾಲೋಚನೆಯಿಂದ ಮಾನಸಿಕ ಕಾಯಿಲೆಯಿಂದ ಹೊರಬಂದು ಉದ್ಯೋಗದಲ್ಲಿ ತೊಡಗಿಸಿಕೊಂಡಿರುವ ಫಲಾನುಭವಿಗಳು. ಆರ್ಬಿಟ್ ಸಂಸ್ಥೆಯ ನವ ಜೀವನ ಕಾರ್ಯಕ್ರಮದ ಅಡಿಯಲ್ಲಿ ಮಾನಸಿಕ ಅಸ್ವಸ್ಥರಿಗೆ ಆಪ್ತಸಮಾಲೋಚನಾ ಸಭೆಗಳನ್ನು ನಡೆಸಲಾಯಿತು. ಪಟ್ಟಣದ ಫಲಾನುಭವಿಗಳಾದ ಅಂಬಾದಾಸ್ ಹಾಗೂ ಆಶಿಯ ಬೇಗಂ ಅವರನ್ನು ಆಪ್ತ ಸಮಾಲೋಚನೆಗೆ ಒಳಪಡಿಸಲಾಯಿತು. ಆಶಯ ಬೇಗಂ ಅವರು ಕುಟುಂಬದ ಒತ್ತಡ ಹಾಗೂ ಅತಿಯಾದ ಆಲೋಚನೆಯಿಂದ ತೀವ್ರತರವಾದ ಮಾನಸಿಕ ಕಾಯಿಲೆಗೆ ಒಳಗಾಗಿದ್ದರು, ಕುಟುಂಬದಲ್ಲಿ ಇವರ ಮಾನಸಿಕ ಕಾಯಿಲೆಯಿಂದಾಗಿ ಇನ್ನುಳಿದ ಸದಸ್ಯರು ಮಾನಸಿಕ ಒತ್ತಡದಿಂದ ಬಳಲಿ ದಿಕ್ಕು ತೋಚದಂತಾಗಿದ್ದರು, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರ ಸಹಾಯದಿಂದ ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದ ಕುರಿತು ಅರಿತುಕೊಂಡು, ನಿರಂತರ ಭೇಟಿ ಹಾಗೂ ಸೂಕ್ತವಾಗಿ ಉಚಿತ ಚಿಕಿತ್ಸೆ ಪಡೆದುಕೊಂಡರು. ನಂತರದ ದಿನಗಳಲ್ಲಿ ಆರ್ಬಿಟ್ ಸಂಸ್ಥೆಯ ವತಿಯಿಂದ ಉಚಿತವಾಗಿ ಆಯೋಜಿಸಲ್ಪಡುವ ಆಪ್ತ ಸಮಾಲೋಚನೆ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಇದರ ಪರಿಣಾಮವಾಗಿ ಆಶಯ ಬೇಗಂ ಅವರು ಮಾನಸಿಕ ಕಾಯಿಲೆಯಿಂದ 80ರಷ್ಟು ಗುಣಮುಖರಾಗಿ ಇಂದು ತಮ್ಮನ್ನು ಟೈಲರಿಂಗ್ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಅದೇ ರೀತಿ ಪಟ್ಟಣದ ನಿವಾಸಿಯಾಗಿರುವ ಶ್ರೀ ಅಂಬಾಸ್ ಅವರು ತೀವ್ರತರವಾದ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದರು. ಸಂಸ್ಥೆಯ ಸಹಾಯದಿಂದ ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದ ಕುರಿತು ಅರಿತುಕೊಂಡು ನಿರಂತರವಾಗಿ ಭೇಟಿ ನೀಡಿ ಸೂಕ್ತ ಚಿಕಿತ್ಸೆ



ಹಾಗೂ ಸಂಸ್ಥೆಯಿಂದ ಒದಗಿಸಲಾಗುವ ಆಪ್ತ ಸಮಾಲೋಚನ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ. ಇಂದು ಮಾನಸಿಕ ಕಾಯಿಲೆಯಿಂದ 70ರಷ್ಟು ಗುಣಮುಖರಾಗಿ ಶಿವು ಪಾಲಿಶ್ ಹಾಗೂ ಚಪ್ಪಲಿ ಹೊಲೆಯುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಫಲಾನುಭವಿಗಳು ಆರ್ಬಿಟ್ ಸಂಸ್ಥೆ ಮಾಡಿರುವ ಸಹಾಯವನ್ನು ಪ್ರಸಂಸಿಸಿ, ಮಾನಸಿಕ ಕಾಯಿಲೆ ಎಂದರೆ ಭೂತ ಚೇಯಷ್ಟೇ ಮಾಟ ಮಂತ್ರ ಎಂದು ನಾವು ಮೂಡನಂಬಿಕೆಗೆ ಬಲಿಯಾಗಿದ್ದೆವು ಈ ಕಾಯಿಲೆಯ ಕುರಿತು ಸೂಕ್ತವಾದ ಮಾಹಿತಿ ಹಾಗೂ ತಿಳುವಳಿಕೆಯನ್ನು ನೀಡಿ ಆರ್ಬಿಟ್ ಸಂಸ್ಥೆಯು ನಮಗೆ ಹೊಸ ಜೀವನ ಒದಗಿಸಿಕೊಟ್ಟಿದೆ ಎಂದು ಫಲಾನುಭವಿಗಳು ಹಾಗೂ ಕುಟುಂಬಸ್ಥರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

## “ಗ್ರಾಮ ಸ್ವಚ್ಛತೆಯ ಜನರೊಂದಿಗೆ ಮಾನಸಿಕ ಅಸ್ವಸ್ಥರ ಆರೋಗ್ಯದ ಅರಿವು”



ಚಿಟಗುಪ್ಪಾ. ತಾಲೂಕಿನ ವಳಖಿಂಡಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ನವಜೀವನ ಕಾರ್ಯಕ್ರಮ ಹಾಗೂ ಅಜೀಮ್ ಪ್ರೇಮ್ ಜೀ ಫೌಂಡೇಶನ್ ಅವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 24 ಅಕ್ಟೋಬರ್ 2025 ರಂದು ಶ್ರೀ ಹನುಮಂತ ರವರು ಸಂಸ್ಥೆಯ ಕಾರ್ಯಕರ್ತರು ಸ್ಥಳೀಯ ಗ್ರಾಮ ಪಂಚಾಯತ್ ಸದಸ್ಯರು ಹಾಗೂ 15 ಸಾರ್ವಜನಿಕರು ಚರಂಡಿ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಜನರಿಗೆ ಮಾನಸಿಕ ಅಸ್ವಸ್ಥರು ಎಂದರೆ ಯಾರು ಅವರ ಲಕ್ಷಣಗಳು ಯಾವ್ಯಾವು. ಅವರಿಗೆ ಜನರು ಏನೆಂದು ಕರೆಯುತ್ತಾರೆ. ಮಾಟ ಮಂತ್ರ ಅಥವಾ ದೆವ್ವ ಹಿಡಿದಿದೆ ಅನುತಾರೆ?. ಅಥವಾ ಇದು ಒಂದು ಮೆದುಳಿನ ರೋಗ ಅಂತಾರೆ?. ಹಾಗಾದರೆ ನಮ್ಮ ಪ್ರಕಾರ ಇದು ವಾಸಿ ಆಗುವಂಥ ರೋಗವು? ಎಂಬ ಮಾಹಿತಿಯನ್ನು ನೀಡಿದರು. ಇಂಥ ರೋಗ ಲಕ್ಷಣವುಳ್ಳ ಜನರು ತಮ್ಮ ಓಣಿಗಳಲ್ಲಿ ಗಲ್ಲಿಗಳಲ್ಲಿ ಕಂಡುಬಂದಲ್ಲಿ ಅವರಿಗೆ ಸ್ಥಳಿಯ ಆಸ್ಪತ್ರೆಗೆ ಕರೆ ತರಲು ತಿಳಿಸಿದರು. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಸಹಾಯವಾಣಿ ಸಂಖೆ 9036664271 ಕರೆ ಮಾಡಿ ಮಾಹಿತಿ ಪಡೆಯಬಹುದು. ಅಲ್ಲದೆ 14416 ಸಂಖ್ಯೆಗೆ ಕರೆ ಮಾಡಿ ಆಪ್ತ  ಸಮಾಲೋಚನೆ ಪಡೆದುಕೊಳ್ಳಬಹುದು ಎಂದು ಮಾಹಿತಿ ಮಾಡಿದರು.

## “ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕ್ರಮ”

### “ಪರಿಸರ ಕುರಿತು ತರಬೇತಿ”



ದಿನಾಂಕ 17 ಅಕ್ಟೋಬರ್ 2025 ರಂದು ಚಿಟ್ಟ ಗ್ರಾಮದಲ್ಲಿ ಪರಿಸರ ಕುರಿತು ತರಬೇತಿ ನೀಡಲಾಯಿತು. ಪರಿಸರ ಎಂದರೇನು? ಪರಿಸರ ಹೇಗೆ ಕಾಪಾಡಬೇಕು ಪರಿಸರ ನಮಗೆ ಯಾಕೆ ಬೇಕು ನಮ್ಮ ಮನೆಯಲ್ಲಿ ಹೇಗೆ ಸ್ವಚ್ಛವಾಗಿ ಇಡುತ್ತೇವೆ ಹಾಗೆ ಮನೆ ಸುತ್ತಮುತ್ತಲು ಹಾಗೆ ಇಡಬೇಕು ಯಾಕಂದ್ರೆ ನಾವು ಆರೋಗ್ಯವಾಗಿ ಇರಬೇಕಾದರೆ ಸ್ವಚ್ಛವಾದ ಪರಿಸರ ಬೇಕು ಪರಿಸರ ಒಳ್ಳೆ ರೀತಿಯಿಂದ ಇದ್ದರೆ ನಮಗೆ ಆರೋಗ್ಯಕರವಾದ ಗಾಳಿ ಸಿಗುತ್ತದೆ ಹೀಗೆ ಮನೆಗೊಂದು ಗಿಡ ಊರಿಗೊಂದು ವನ ಇರಬೇಕೆಂದು ತರಬೇತಿಯಲ್ಲಿ ಹೇಳಲಾಯಿತು

## "ಸಂವಿಧಾನಿಕ ಹಕ್ಕುಗಳ ಕುರಿತು ತರಬೇತಿ"



ದಿನಾಂಕ: 07 ಅಕ್ಟೋಬರ್ 2025ರಂದು ಓಥಗಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಮಹಿಳಾ ಅಭಿವೃದ್ಧಿ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಸವಿತಾ ರವರು ಸಂವಿಧಾನಿಕ ಹಕ್ಕುಗಳ ಕುರಿತು ತರಬೇತಿಯನ್ನು ಆಯೋಜಿಸಿದರು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ರವರು ಭಾಗವಹಿಸಿದರು. ಅವರು ಮೇರಿ ಮಹಾಸಂಗದ ಸದಸ್ಯರಿಗೆ ಸಂವಿಧಾನ ಎಂದರೇನು ಎಂಬುದನ್ನು ವಿವರಿಸಿದರು. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಎಲ್ಲಾ ಧರ್ಮದವರಿಗೂ ಒಂದೇ ಸಂವಿಧಾನವನ್ನು ರಚಿಸಿದ್ದು, ವಿಶೇಷವಾಗಿ ಮಹಿಳೆಯರಿಗೆ ಸಮಾಜದಲ್ಲಿ ಉತ್ತಮ ಸ್ಥಾನಮಾನ ಕಲ್ಪಿಸುವಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ ಎಂದು ಹೇಳಿದರು. ಹಿಂದಿನ ಕಾಲದಲ್ಲಿ ರಾಜಮನೆತನದವರೇ ಆಳ್ವಿಕೆ ನಡೆಸುತ್ತಿದ್ದರು, ಆದರೆ ಸಂವಿಧಾನವು ಎಲ್ಲರಿಗೂ ಸಮಾನ ಹಕ್ಕುಗಳನ್ನು ನೀಡಿದೆ. ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು, ರಾಜಕೀಯದಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು. ಸಂವಿಧಾನವು "ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ಸರ್ಕಾರ" ಎಂಬ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಒದಗಿಸಿದೆ. ಸಂವಿಧಾನದಲ್ಲಿ ಮೂರು ಹಂತಗಳಿವೆ: ಶಾಸನಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇವು ಸಂವಿಧಾನದ ಅಡಿಯಲ್ಲಿ ಕಾನೂನನ್ನು ಅನುಷ್ಠಾನಗೊಳಿಸುವ ಹಾಗೂ ಹಕ್ಕುಗಳ ಉಲ್ಲಂಘನೆ ಯಾಗದಂತೆ ತಡೆಯುವ ಪ್ರಮುಖ ಅಂಗಾಂಗಗಳಾಗಿವೆ. ಈ ತರಬೇತಿಯಲ್ಲಿ 15 ಸದಸ್ಯರು ಭಾಗವಹಿಸಿ ಸಂವಿಧಾನದ ಮಹತ್ವವನ್ನು ತಿಳಿದುಕೊಂಡರು.

## "ಕಿರಣ ಜ್ಯೋತಿ ಮಹಾಸಂಗದ ಸದಸ್ಯರಿಗೆ ಸಂವಿಧಾನ ಹಕ್ಕುಗಳ ಕುರಿತು ತರಬೇತಿ"



ದಿನಾಂಕ 25 ಅಕ್ಟೋಬರ್ 2025ರಂದು ಮುರಾಳ ಗ್ರಾಮ (ಬಾಲ್ಕಿ ತಾಲೂಕು) ಕಿರಣ ಜ್ಯೋತಿ ಮಹಾಸಂಗದ ಸದಸ್ಯರಿಗೆ ಸಂವಿಧಾನ ಹಕ್ಕುಗಳ ಕುರಿತು ತರಬೇತಿ ನೀಡಲಾಯಿತು. ಸಂವಿಧಾನ ಎಂದರೆ ನಮ್ಮ ದೇಶದ ಪ್ರಥಮ ಮತ್ತು ಪ್ರಮುಖ ಪುಸ್ತಕ. ಇದನ್ನು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರು ರಚಿಸಿದ್ದಾರೆ. ದೇಶವನ್ನು ಹೇಗೆ ನಡೆಸಬೇಕು ಮತ್ತು ಸರ್ಕಾರದ ವ್ಯವಸ್ಥೆ ಹೇಗಿರಬೇಕು ಎಂಬುದನ್ನು ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಈ ಸಂವಿಧಾನವು 1950ರ ಜನವರಿ 26ರಂದು ಜಾರಿಯಾಯಿತು. ಆ ದಿನವನ್ನು ದೇಶದಾದ್ಯಂತ ಗಣರಾಜ್ಯೋತ್ಸವದ ದಿನವಾಗಿ ಆಚರಿಸಲಾಗುತ್ತದೆ. ಸಂವಿಧಾನದ ಮೂಲ ಉದ್ದೇಶ ಶಾಸನಾಂಗ, ಕಾರ್ಯಾಂಗ, ನ್ಯಾಯಾಂಗ ಇವುಗಳ ಮೂಲಕ ದೇಶದಲ್ಲಿ ಪ್ರಜಾಪ್ರಭುತ್ವದ ಆಡಳಿತವನ್ನು ಸ್ಥಾಪಿಸುವುದು. ಸಂವಿಧಾನವು ಪ್ರಜೆಗಳಿಗೆ ಸಮಾನತೆ, ಧಾರ್ಮಿಕ ಸ್ವಾತಂತ್ರ್ಯ, ಶೈಕ್ಷಣಿಕ ಹಕ್ಕು, ಬದುಕುವ ಹಕ್ಕು ಮುಂತಾದ ಹಲವು ಮೂಲಭೂತ ಹಕ್ಕುಗಳನ್ನು ನೀಡಿದೆ. ಸಂವಿಧಾನವನ್ನು ಗೌರವಿಸಬೇಕು ಮತ್ತು ಅದರ ಹಕ್ಕುಗಳನ್ನು ಅರಿತು ಪಾಲಿಸಬೇಕು ಎಂದು ತಿಳಿಸಿ ತರಬೇತಿಯನ್ನು ಮುಕ್ತಾಯ ಮಾಡಲಾಯಿತು.

## "ಉಚಿತ ಕಾನೂನು ಸೇವೆಗಳ ಕುರಿತ ತರಬೇತಿ"




ದಿನಾಂಕ 07 ಅಕ್ಟೋಬರ್ 2025 ರಂದು ಹುಮ್ನಾಬಾದ್ ಆರ್ಬಿಟ್ ಸಂಸ್ಥೆ ಮತ್ತು ಕ್ರಾಸ್ ಸಂಸ್ಥೆಯ ಸಹಭಾಗಿತ್ವದಲ್ಲಿ ಉಚಿತ ಕಾನೂನು ಸೇವೆಗಳ ಕುರಿತ ತರಬೇತಿಯನ್ನು ಆಯೋಜಿಸಲಾಯಿತು. ಕಾರ್ಯಕ್ರಮದ ಪ್ರಾರಂಭದಲ್ಲಿ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಅತೀ ವಂದನಿಯ ಫಾದರ್ ವಿಕ್ಟರ್ ವಾಸ್ ರವರು ಕಾನೂನು ಕುರಿತು ತಿಳಿದುಕೊಳ್ಳುವುದು ಪ್ರತಿಯೊಬ್ಬರಿಗೂ ಅತ್ಯಾವಶ್ಯಕ ಎಂದು ಹೇಳಿದರು. ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಫಾದರ್ ವಿನ್ಸೆಂಟ್ ಪೆರೇರ (ವಕೀಲರು, ಗುಲ್ಬರ್ಗ ಧರ್ಮಕ್ಷೇತ್ರ) ಅವರು ಉಚಿತ ಕಾನೂನು ಸೇವೆ ಪಡೆಯುವ ವಿಧಾನವನ್ನು ವಿವರಿಸಿದರು. 15100 ಎಂಬ ಸಹಾಯವಾಣಿ ಸಂಖ್ಯೆಯ ಮೂಲಕ ವರ್ಷಕ್ಕೆ 3 ಲಕ್ಷಕ್ಕಿಂತ ಕಡಿಮೆ ಆದಾಯ ಹೊಂದಿರುವವರು ಈ ಸೇವೆಯನ್ನು ಪಡೆಯಬಹುದು ಎಂದು ತಿಳಿಸಿದರು. ಈ ಸೇವೆಯನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ವಿಶೇಷ ಚೇತನರು, ಕಾರ್ಮಿಕರು, ಹಿಂದುಳಿದವರು, ಕೈದಿಗಳು ಬಳಸಿಕೊಳ್ಳಬೇಕು ಎಂದು ಹೇಳಿದರು. ಪಿ.ಎಲ್.ವಿ.ಗಳ ಸಹಾಯದಿಂದ ಯಾವುದೇ ಕಾನೂನು ಸಮಸ್ಯೆಗಳಿಗೂ ನೆರವು ಪಡೆಯಬಹುದು ಎಂದು ತಿಳಿಸಿದರು. ತಾಲೂಕು, ಜಿಲ್ಲಾ ಮತ್ತು ಸುಪ್ರೀಂ ಕೋರ್ಟ್ ಮಟ್ಟದಲ್ಲಿ ಈ ಸೇವೆಗಳ ಬಳಕೆ ಕುರಿತು ಮಾಹಿತಿ ನೀಡಿದರು. ತರಬೇತಿಯಲ್ಲಿ ರಾಜ್ಯ ಸಂಯೋಜಕ ಶ್ರೀ ರಾಜಶೇಖರ್, ಕ್ರಾಸ್ ಸಂಸ್ಥೆ ಬೆಂಗಳೂರು ನಿರ್ದೇಶಕರು, ಉಪ ನಿರ್ದೇಶಕರು, ಬಿ.ಡಿ.ಎಸ್.ಎಸ್, ಬಿ.ಡಿ.ಡಿ.ಎಸ್ ಸಂಸ್ಥೆಯ ಸಂಯೋಜಕರು, ಕಾರ್ಯಕರ್ತರು ಮತ್ತು ಶಿಬಿರಾರ್ಥಿಗಳು ಸೇರಿ ಒಟ್ಟು 42 ಜನರು ಭಾಗವಹಿಸಿದರು.



## “ನಿಂಬೂರ್ ಗ್ರಾಮದ ಸಮಸ್ಯೆ ಪರಿಹಾರ ಕಾರ್ಯ”



ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲೂಕಿನ ನಿಂಬೂರ್ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಕೊಳವೆಬಾವಿ, ಕಳೆದ ಒಂದು ವರ್ಷದಿಂದ ಹಾಳಾಗಿದ್ದು ಮಕ್ಕಳಿಗೆ ಅಪಾಯದ ಪರಿಸ್ಥಿತಿ ಉಂಟಾಗಿತ್ತು. ಈ ಸಮಸ್ಯೆಯನ್ನು ಸಂಘ ಮತ್ತು ಮಹಾಸಂಗಗಳಲ್ಲಿ ಚರ್ಚಿಸಿ, ಗ್ರಾಮ ಪಂಚಾಯತ್ ಪಿ.ಡಿ.ಓ ಅವರ ಗಮನಕ್ಕೆ ತರಲಾಯಿತು. ಶಾಲೆಯ ಮುಖ್ಯಗುರುಗಳು ಹಾಗೂ ಅಂಗನವಾಡಿ ಕಾರ್ಯಕರ್ತೆಯರೊಂದಿಗೆ ಸಹ ಈ ವಿಷಯದ ಬಗ್ಗೆ ಚರ್ಚೆ ನಡೆಯಿತು. ಆರ್ಬಿಟ್ ಸಂಸ್ಥೆಯ ಮಹಿಳಾ ಸಂಘಗಳು ಮತ್ತು ಮಹಾಸಂಗದ ಸದಸ್ಯರು ಗ್ರಾಮ ಪಂಚಾಯತ್ ಪಿ.ಡಿ.ಓ ಅವರನ್ನು ಹಲವಾರು ಬಾರಿ ಭೇಟಿಯಾಗಿ ಈ ಸಮಸ್ಯೆ ಪರಿಹಾರಕ್ಕಾಗಿ ಒತ್ತಾಯಿಸಿದರು. ಸತತ ಪ್ರಯತ್ನದ ಫಲವಾಗಿ ಗ್ರಾಮ ಪಂಚಾಯತ್ ಪಿ.ಡಿ.ಓ ಅವರು ಕೊಳವೆಬಾವಿಗೆ ಮುಚ್ಚಳ ಹಾಕುವ ಮೂಲಕ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಿದರು. ಶಾಲೆಯ ಮುಖ್ಯಗುರುಗಳು ಆರ್ಬಿಟ್ ಸಂಸ್ಥೆ ಮಾಡುತ್ತಿರುವ ಸಮಾಜ ಸೇವಾ ಕಾರ್ಯವನ್ನು ಶ್ಲಾಘಿಸಿ ಮಾತನಾಡಿ, ಶಾಲೆಯ ಪರವಾಗಿ ಸಂಸ್ಥೆಗೆ ಧನ್ಯವಾದಗಳನ್ನು ಸಲ್ಲಿಸಿದರು.

## “ಜಾಗತಿಕ ತಾಪಮಾನ ಕುರಿತು ತರಬೇತಿ”

ದಿನಾಂಕ 18 ಅಕ್ಟೋಬರ್ 2025ರಂದು ಕೋಸಂ ಗ್ರಾಮ (ಬಾಲ್ಕಿ ತಾಲೂಕು) ಮಹಿಳಾ ಸಬಲೀಕರಣ ಕಾರ್ಯಕರ್ತರಾದ ಶ್ರೀ ಪ್ರಭು ಸರ್ ರವರು “ಜಾಗತಿಕ ತಾಪಮಾನ” ಕುರಿತು ತರಬೇತಿ ನೀಡಿದರು. ಜಾಗತಿಕ ತಾಪಮಾನ ಎಂದರೆ? ಭೂಮಿಯ ವಾತಾವರಣದಲ್ಲಿ ಅತಿಯಾದ ಬದಲಾವಣೆಗಳು ಸಂಭವಿಸುವುದು, ಉದಾ: ಭೂ ಕುಸಿತ, ಭೂಕಂಪ, ಸಮುದ್ರದ ಅಲೆಗಳ ಏರಿಕೆ, ಅತಿಯಾದ ಮಳೆ ಅಥವಾ ಶಾಖ ಇತ್ಯಾದಿ. ಇಂತಹ ಪರಿಸ್ಥಿತಿಯನ್ನು ತಡೆಗಟ್ಟಲು ಮರಗಳನ್ನು ಬೆಳೆಯಬೇಕು, ಪ್ಲಾಸ್ಟಿಕ್ ಬಳಕೆಯನ್ನು ಕಡಿತಗೊಳಿಸಬೇಕು, ಪರಿಸರವನ್ನು ಗೌರವಿಸಬೇಕು ಎಂದು ತಿಳಿಸಿದರು. ಈ ತರಬೇತಿತಲ್ಲಿ 17 ಜನ ಮಹೀಳೆಯರು ಭಾಗವಹಿಸಿ ಉಪಯೋಗವನ್ನು ಪಡೆದುಕೊಂಡರು.




## “ಸಂಘರ್ಷ ನಿರ್ವಹಣೆ ಕುರಿತು ತರಬೇತಿ”



ದಿನಾಂಕ 16 ಅಕ್ಟೋಬರ್ 2025ರಂದು ಚಿಟಗುಪ್ಪಾ ತಾಲೂಕಿನ ಉಡಬಾಳ ಗ್ರಾಮದಲ್ಲಿ ತಾವರೆ ಮಹಾಸಂಗದ ಸಭೆಯನ್ನು ನಡೆಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕಿ ಶ್ರೀಮತಿ ನಿರ್ಮಲ ಅವರು “ಸಂಘರ್ಷ ನಿರ್ವಹಣೆ” ಕುರಿತು ತರಬೇತಿ ನೀಡಿದರು. ಸಂಘರ್ಷ ಎಂದರೆ ಕಲಹ ಅಥವಾ ಜಗಳ ಎನ್ನುವ ಅರ್ಥ. ಸಂಘಗಳು ಮತ್ತು ಮಹಾಸಂಗಗಳಲ್ಲಿ ಯಾವುದೇ ಕಲಹ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಕುಟುಂಬಗಳಲ್ಲಿ ಮತ್ತು ಸಮುದಾಯದಲ್ಲಿ ಶಾಂತತೆಯನ್ನು ಕಾಪಾಡಬೇಕು. ಸಮಸ್ಯೆಗಳಿದ್ದರೆ ಪರಿಹಾರ ಮಾರ್ಗಗಳನ್ನು ಹುಡುಕಬೇಕು ಎಂದು ಹೇಳಿದರು. ಈ ತರಬೇತಿಯಲ್ಲಿ ಸದಸ್ಯರು ಸಂಘರ್ಷದ ಅರ್ಥ, ದುಷ್ಪರಿಣಾಮಗಳು ಮತ್ತು ಪರಿಹಾರ ಕ್ರಮಗಳನ್ನು ತಿಳಿದುಕೊಂಡರು.

## “ಸಬಲತೆಗೆ ಸಹಕಾರಿಯಾದ ಆರ್ಬಿಟ”



ವ್ಯಕ್ತಿಯ ಹಿನ್ನೆಲೆ: ಹೆಸರು: ಶ್ರೀಮತಿ ಸಂಗೀತ ಹಳ್ಳಿ: ಭಾತಂಬ್ರಾ ಸಂಘದ ಹೆಸರು: ಆಶ್ರಯ ಶ್ರೀಮತಿ ಸಂಗೀತ ಅವರಿಗೆ ಒಬ್ಬ ಗಂಡು ಹಾಗೂ ಮೂವರು ಹೆಣ್ಣು ಮಕ್ಕಳು ಇದ್ದಾರೆ. ಮಕ್ಕಳನ್ನು ಸಾಕುವುದು ತುಂಬಾ ಕಷ್ಟಕರವಾಗಿತ್ತು. ಅವರ ಗಂಡ ಲಾರಿ ಡ್ರೈವರ್ ಕೆಲಸ ಮಾಡುತ್ತಿದ್ದಾರೆ. ಸಮಸ್ಯೆ ಮತ್ತು ಪರಿಹಾರ: ಶ್ರೀಮತಿ ಸಂಗೀತ ರವರು ಮನೆಯಲ್ಲಿ ಗ್ರಿಹಿಣಿಯಾಗಿ ಇದ್ದರು. ನಂತರ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರೊಂದಿಗೆ ಪರಿಚಯ ಬೆಳೆಸಿ, ಆಶ್ರಯ ಸಂಘದಲ್ಲಿ ಸೇರಿಕೊಂಡು ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದರು. ಅವರು ಪ್ರೇಮಜ್ಯೋತಿ ಮಹಾಸಂಗದ ಸದಸ್ಯೆಯಾಗಿ ಹಲವು ತರಬೇತಿಗಳನ್ನು ಪಡೆದುಕೊಂಡರು. ಈಗ ಅವರು “ಡಿಜಿಟಲ್ ಸಕಿ” ಆಗಿ ಹಲವಾರು ಜನರಿಗೆ ಸಹಾಯ ಮಾಡುತ್ತಿದ್ದಾರೆ. ಹಾಗೂ ಡಿಸಿಸಿ ಬ್ಯಾಂಕ್ನಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಮಕ್ಕಳು ಓದುತ್ತಿದ್ದಾರೆ. ಅವರ ಗಂಡ ಈಗ ಇಲ್ಲ, ಆದರೂ ಇಂದು ತಮ್ಮ ಕೆಲಸದಿಂದಾಗಿ ಅವರಿಗೆ ಯಾವುದೇ ಆರ್ಥಿಕ ತೊಂದರೆ ಇಲ್ಲ. ಅವರ ಒಬ್ಬ ಹೆಣ್ಣು ಮಗಳು ಕೂಡ ಅವರ ಕೆಲಸದಲ್ಲಿ ಸಹಕರಿಸುತ್ತಿದ್ದಾರೆ. ಆರ್ಬಿಟ್ ಸಂಸ್ಥೆಯ ಸಹಾಯ: ಆರ್ಬಿಟ್ ಸಂಸ್ಥೆಯ ಅಡಿಯಲ್ಲಿರುವ ಆಶ್ರಯ ಸಂಘದಲ್ಲಿ ಸೇರಿಕೊಂಡು, ಹಲವಾರು ತರಬೇತಿಗಳನ್ನು ಪಡೆದುಕೊಂಡು, ಇಂದು ನನ್ನ ಕುಟುಂಬ ಸುಖವಾಗಿ ಬದುಕುತ್ತಿದೆ. ನನ್ನ ಪರವಾಗಿ ಹಾಗೂ ನನ್ನ ಕುಟುಂಬದ ಪರವಾಗಿ, ಆರ್ಬಿಟ್ ಸಂಸ್ಥೆಗೆ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ಶ್ರೀಮತಿ ಸಂಗೀತ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

## "ಆರೋಗ್ಯ ಜಾಗೃತಿ ತರಬೇತಿ ಕಾರ್ಯಕ್ರಮ"



28 ಅಕ್ಟೋಬರ್ 2025ರಂದು ಸಂತಪುರದಲ್ಲಿ ಸ್ವಸಹಾಯ ಸಂಘದ ಮಹಿಳೆಯರಿಗಾಗಿ ಆರೋಗ್ಯ ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮವನ್ನು ಸ್ಥಳೀಯ ಸಂಯೋಜಕಿ ಸೌ. ಸಿಸ್ಟರ್ ಲೀನಟ್ ಅವರ ಮಾರ್ಗದರ್ಶನದಲ್ಲಿ ನಡೆಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಶೃತಿ, ಪ್ರಾಥಮಿಕ ಆರೋಗ್ಯ ಕೇಂದ್ರ ಸಂತಪುರದ ಆರೋಗ್ಯ ಸಲಹೆಗಾರ್ತಿ ಹಾಜರಿದ್ದರು. ಅವರು ಮಹಿಳೆಯರ ಹಾಗೂ ಯುವತಿಯರ ಆರೋಗ್ಯ ಸಮಸ್ಯೆಗಳ ಬಗ್ಗೆ ಮಾತನಾಡಿ, ಸ್ವಚ್ಛತೆ, ಸಮತೋಲನ ಆಹಾರ, ನಿಯಮಿತ ವ್ಯಾಯಾಮ, ಮಾನಸಿಕ ಆರೋಗ್ಯದ ಕಾಳಜಿ ಇತ್ಯಾದಿ ವಿಷಯಗಳ ಕುರಿತು ಉಪಯುಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ಅವರು ವಿಶೇಷವಾಗಿ ಮಹಿಳೆಯರ ಶಾರೀರಿಕ ಮತ್ತು ಮಾನಸಿಕ ಆರೋಗ್ಯದ ಮಹತ್ವವನ್ನು ಹಂಚಿಕೊಳ್ಳುತ್ತಾ, ಸಮಯಕ್ಕೆ ಸರಿಯಾದ ವೈದ್ಯಕೀಯ ತಪಾಸಣೆ, ಪೌಷ್ಟಿಕ ಆಹಾರದ ಸೇವನೆ ಮತ್ತು ದಿನನಿತ್ಯದ ಆರೋಗ್ಯಕರ ಜೀವನಶೈಲಿಯ ಕುರಿತು ಜಾಗೃತಿ ಮೂಡಿಸಿದರು. ಈ ತರಬೇತಿ ಕಾರ್ಯಕ್ರಮದ ಮೂಲಕ ಮಹಿಳೆಯರು ತಮ್ಮ ಜೀವನದಲ್ಲಿ ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಅಗತ್ಯವನ್ನು ಅರಿತುಕೊಂಡರು. ಕಾರ್ಯಕ್ರಮದ ಆರಂಭದಲ್ಲಿ ಸಿಸ್ಟರ್ ಲೀನಟ್, ಸ್ಥಳೀಯ ಸಂಯೋಜಕಿ, ಸ್ವಾಗತ ಭಾಷಣ ನೀಡಿ ಎಲ್ಲರನ್ನು ಆತ್ಮೀಯವಾಗಿ ಬರಮಾಡಿಕೊಂಡರು. ತರಬೇತಿಯ ಅಂತ್ಯದಲ್ಲಿ ಅವರು ಸಂಪನ್ಮೂಲ ವ್ಯಕ್ತಿಗೆ ಮತ್ತು ಹಾಜರಾಗಿದ್ದ ಎಲ್ಲಾ ಮಹಿಳೆಯರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಈ ಕಾರ್ಯಕ್ರಮ ಮಹಿಳೆಯರಿಗೆ ಆರೋಗ್ಯದ ಕುರಿತು ಅರಿವು ಮೂಡಿಸಿ, ಉತ್ತಮ ಜೀವನಶೈಲಿಯತ್ತ ದಾರಿ ತೋರಿಸುವಲ್ಲಿ ಬಹುಮುಖ್ಯವಾದ ಅನುಭವವಾಗಿತು.

## "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

### "ಪೋಷಕರ ಸಭೆ ಹಾಗೂ ಪೋಷಕರ ಒಕ್ಕೂಟ ಕಾರ್ಯಕ್ರಮ"



10 ಅಕ್ಟೋಬರ್ 2025ರಂದು ಹುಮನಾಬಾದ ವಲಯದ ಆರ್ಬಿಟ್ ಸಭಾಂಗಣದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಪೋಷಕರ ಸಭೆ ಹಾಗೂ ಪೋಷಕರ ಒಕ್ಕೂಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷ ಸ್ಥಾನವನ್ನು ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಒಂದನೇ ಫಾದರ್ ಆಲ್ಬರ್ಟ್ ರವರು ವಹಿಸಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಕ್ಕಳಲ್ಲಿ ಯಾವ ರೀತಿ ನೋಡಿಕೊಳ್ಳಬೇಕು ಮಕ್ಕಳಿಗೆ ಹೆಚ್ಚಿನ ಪ್ರೀತಿ ಕೊಡಬೇಕು ಕೀಳಾಗಿ ನೋಡಬೇಡಿ ಎಂದು ತಿಳಿಸಿದರು. ಈ ತರಬೇತಿಯನ್ನು ಪಡೆದುಕೊಂಡು ಮಕ್ಕಳಿಗೆ ಚಟುವಟಿಕೆ ಮಾಡುವುದರ ಮುಖಾಂತರ ಬದಲಾವಣೆ ತರಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಸದಾನಂದ ಸ್ವಾಮಿ ರವರು ಪೋಷಕರ ಸಭೆಯ ಒಕ್ಕೂಟದ ರಚನೆ ಉದ್ದೇಶ ಮತ್ತು ಗುರಿಯ ಬಗ್ಗೆ ಹೇಳಿದರು. ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಿಗೆ ಸರ್ಕಾರದಿಂದ ಸಿಗುವ ಹಕ್ಕುಗಳ ಬಗ್ಗೆ ಕುರಿತು ತಿಳಿಸಿದರು. ಈ ಸಭೆಯಲ್ಲಿ ಸುಮಾರು 20 ಜನ ಪೋಷಕರು ಇದರ ಸದುಪಯೋಗ ಪಡೆದುಕೊಂಡರು. ಇಂದಿನ ಸಭೆಯ ಕಾರ್ಯಕ್ರಮವನ್ನು ನಿರೂಪಣೆ ಶ್ರೀ ಸೂರ್ಯಕಾಂತ್, ಸ್ವಾಗತ ಶ್ರೀಮತಿ ಕವಿತಾ, ಶ್ರೀಮತಿ ಮಮತಾರವರು ವಂದನ ಅರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

### "ವಿಶೇಷ ವಿಕಲಚೇತನ ಮಕ್ಕಳ ಬಗ್ಗೆ ಜಾಗೃತಿ"



06 ಅಕ್ಟೋಬರ್ 2025ರಂದು ಹುಮನಾಬಾದ್ ತಾಲೂಕಿನ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಯೋಜನೆಯ ಅಡಿಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು, ಬಸವಕಲ್ಯಾಣ ತಾಲೂಕಿನ ತಡೋಳ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ವಿಶೇಷ ವಿಕಲಚೇತನ ಮಕ್ಕಳ ಬಗ್ಗೆ ಗ್ರಾಮದ ಸದಸ್ಯರಿಗೆ ಜಾಗೃತಿ ಮೂಡಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಗೋವಿಂದ್ ರೆಡ್ಡಿ ಎಚ್‌ಐಓ ಸರ್ ರವರು ಭಾಗವಹಿಸಿದರು. ವಿಕಲತೆ ಮಕ್ಕಳು ಹುಟ್ಟಲು ಕಾರಣ, ರಕ್ತ ಸಂಬಂಧದಲ್ಲಿ ಮದುವೆ ಆದರೆ ಜನನದ ಸಮಯದಲ್ಲಿ, ಅಪಘಾತಗಳು ಆದಾಗ ವಿಕಲತೆ ಮಕ್ಕಳು ಹುಟ್ಟಬಹುದು. ಆದ್ದರಿಂದ ಪೋಷಕರು ಇದರ ಬಗ್ಗೆ ಗಮನ ಹರಿಸುವುದಾಗಿ ತಿಳಿಸಲಾಯಿತು. ವಿಕಲತೆಯನ್ನು ಹೋಗಲಾಡಿಸಲು ಆರ್ಬಿಟ್ ಸಂಸ್ಥೆ ಕೇಂದ್ರದಲ್ಲಿ ಮಕ್ಕಳಿಗೆ ಚಟುವಟಿಕೆಗಳು ಮಾಡುವ ಮುಖಾಂತರ ಬದಲಾವಣೆ ತರಲಿದ್ದೇವೆ. ಅಂತಹ ಮಕ್ಕಳು ಕಂಡುಬಂದಲ್ಲಿ ಆರ್ಬಿಟ್ ಸಂಸ್ಥೆಗೆ ಕರೆ ಮುಖಾಂತರ ತಿಳಿಸುವುದಾಗಿ ಹೇಳಲಾಯಿತು. ಮಕ್ಕಳಿಗೆ ಸರಕಾರದಿಂದ ಸಿಗುವಂತಹ ಸೌಲಭ್ಯಗಳು ಯುಡಿಐಡಿ ಕಾರ್ಡ್ ಕೂಡ ಮಾಡಿಸಿ ಕೊಳ್ಳಲು ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಗ್ರಾಮದ ಸದಸ್ಯರು, ಒಟ್ಟು ಸೇರಿ 20 ಜನರಿಗೆ ಜಾಗೃತಿ ಮೂಡಿಸಲಾಯಿತು.

## “ಉಪಕೇಂದ್ರದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಚಟುವಟಿಕೆ”



27 ಅಕ್ಟೋಬರ್ 2025ರಂದು ಹುಮ್ನಾಬಾದ್ ತಾಲೂಕಿನ ಘಾಟಬೋರಾಳ ಗ್ರಾಮದ ಉಪಕೇಂದ್ರದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಚಟುವಟಿಕೆಗಳನ್ನ ಹಮ್ಮಿಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತರಾದ ಅರ್ಚನ ರವರು ಭಾಗವಹಿಸಿ ಮಕ್ಕಳಿಗೆ ಚಟುವಟಿಕೆ ಮಾಡಿಸುವಲ್ಲಿ ಸಹಕಾರವನ್ನು ನೀಡಿದರು. ಸಾಮಾನ್ಯ ಮಕ್ಕಳೊಂದಿಗೆ ಬೆರೆತು ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಿಗೆ ಎರಡು ಅಕ್ಷರದ ಶಬ್ದಗಳು ಮೂರಕ್ಷರದ ಶಬ್ದಗಳಿಂದ ಉಚ್ಚಾರಣೆ ಮಾಡಲು ಪ್ರಾಯೋಗಿಕವಾಗಿ ತಿಳಿಸಲಾಯಿತು. ಯಾವ ಅಕ್ಷರಗಳು ಗಂಟಲಿಂದ ನಾಲಿಗೆಯಿಂದ ಉಚ್ಚಾರಣೆ ಆಗುತ್ತವೆ ಅನ್ನುವುದರ ಕುರಿತು ಮಾಹಿತಿಯನ್ನು ನೀಡಲಾಯಿತು. ವಸ್ತುಗಳನ್ನು ಒಂದು ಕೈಯಿಂದ ಇನ್ನೊಂದು ಕೈಗೆ ಬದಲಾವಣೆ ಮಾಡುವಂತಹ ಚಟುವಟಿಕೆಗಳು ಕುರಿತು ಮಾಹಿತಿ ನೀಡಲಾಯಿತು. ಮಕ್ಕಳಿಗೆ ಪ್ರಾಥಮಿಕವಾಗಿ ಬಣ್ಣಗಳನ್ನು ಗುರುತಿಸುವ ಚಟುವಟಿಕೆ ನೀಡಲಾಯಿತು. ಜೊತೆಗೆ ಮಕ್ಕಳಿಗೆ ಸಾಮಾನ್ಯ ಮಕ್ಕಳು ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಿಗೆ ಪರಸ್ಪರವಾಗಿ ಸಹಾಯವನ್ನು ಮಾಡಬೇಕೆಂದು ಅಂಗನವಾಡಿ ಕಾರ್ಯಕರ್ತರು ಮಕ್ಕಳಿಗೆ ಮಾಹಿತಿಯನ್ನು ನೀಡಿದರು. ಜೊತೆಗೆ ಮಕ್ಕಳಿಗೆ ಆಟದ ಜೊತೆಗೆ ದಹಿಕವಾಗಿ ಬದಲಾವಣೆಯನ್ನು ಹೊಂದಬಹುದೆಂದು ಮಾಹಿತಿ ತಿಳಿಸಲಾಯಿತು.

## “ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ”

### “ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ”



ಅಕ್ಟೋಬರ್ ತಿಂಗಳಿನಲ್ಲಿ ಬಸವಕಲ್ಯಾಣ ತಾಲೂಕಾ ಸಾರ್ವಜನಿಕ ಆಸ್ಪತ್ರೆಯಲ್ಲಿ, ಆರ್ಬಿಟ್ ಸಂಸ್ಥೆಯ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್, ಮತ್ತು ತಾಲೂಕ ಆರೋಗ್ಯ ಇಲಾಖೆ, ವಿಶೇಷ ಚೇತನರ ಸಬಲೀಕರಣ ಇಲಾಖೆಗಳ ಜಂಟಿ ಆಶ್ರಯದಲ್ಲಿ, "ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ" ಆಚರಿಸಲಾಯಿತು. ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ಆಲ್ಬರ್ಟ್, ಕಾರ್ಯಕ್ರಮದ ವ್ಯವಸ್ಥಾಪಕಿಯಾದ ಸಿಸ್ಟರ್. ಕ್ರಿಸ್ಟೀನಾ ರವರು ಸಂಸ್ಥೆಯ ಉದ್ದೇಶದ ಕುರಿತು ಹಾಗೂ ಮಾನಸಿಕ ಆರೋಗ್ಯದ ಕುರಿತು ಸಮಾಜದಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ, ಪ್ರತಿಯೊಬ್ಬರೂ ಮಾನಸಿಕವಾಗಿ ಬಲಿಷ್ಠರಾಗಲು ಸಹಾನುಭೂತಿ, ಪ್ರೋತ್ಸಾಹ ಮತ್ತು ಪರಸ್ಪರ ಬೆಂಬಲದ ಮನೋಭಾವವನ್ನು ಬೆಳೆಸಿಕೊಳ್ಳಲು ಕರೆ ನೀಡಿದರು. ಈ ಕಾರ್ಯಕ್ರಮದ ಪ್ರಮುಖ ಉಪನ್ಯಾಸಕರಾಗಿ ಮನೋವೈದ್ಯರಾದ ಡಾ. ರಿತೇಶ್ ಮಾತನಾಡಿ, ಮಾನಸಿಕ ಆರೋಗ್ಯದ ಮಹತ್ವ ಮತ್ತು ಅದಕ್ಕಾಗಿ ವ್ಯಾಯಾಮ ಮತ್ತು ಸಕರಾತ್ಮಕ ಚಿಂತನೆಯ ಎಷ್ಟು ಮುಖ್ಯ ಎಂದು ವಿವರಿಸಿದರು. ಮುಖ್ಯ ಅತಿಥಿಗಳಾಗಿ ಡಾ. ಅಶೋಕ್ ಮೈಲಾರೆ, ತಾಲೂಕ ಆರೋಗ್ಯ ಅಧಿಕಾರಿಗಳು ಇಂದಿನ ಜನರ ಜೀವನ ಶೈಲಿಯ ಕುರಿತು ಅರಿವು ಮೂಡಿಸಿದರು. ಈ ಕಾರ್ಯಕ್ರಮದಲ್ಲಿ ತಾಲೂಕ ಸಾರ್ವಜನಿಕ ಆಸ್ಪತ್ರೆಯ ಮುಖ್ಯ ಆಡಳಿತ ವೈದ್ಯಾಧಿಕಾರಿಯಾದ ಡಾ. ಯುವರಾಜ್ ಬಿರಾದರ್, ಆರ್ಬಿಟ್ ಸಂಸ್ಥೆಯ ಸಿಬ್ಬಂದಿವರ್ಗ, ಮಾನಸಿಕ ಆರೋಗ್ಯ ಕ್ಷೇತ್ರದ ಸಾಮಾಜ ಕಾರ್ಯಕರ್ತರು, ಫಲಾನುಭವಿಗಳು, ಪೋಷಕರು ಸ್ಥಳೀಯ ನಾಗರಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



17 ಅಕ್ಟೋಬರ 2025 ರಂದು ಕಮಲನಗರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ, ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್,ಲವ್,ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಮನೋವೈದ್ಯರಾದ ಡಾ. ಮಲ್ಲಿಕಾರ್ಜುನ್ ಹಾಗೂ ತಾಲೂಕಾ ವೈದ್ಯಾಧಿಕಾರಿ ಡಾ. ಶ್ರೀಮಂತ ಸರ್ ಮತ್ತು ಕಮಲನಗರ್ ತಾಲೂಕಿನ ಪಿ.ಎಸ್.ಐ ಶ್ರೀಮತಿ ಆಶಾ ರಾಠೋಡ್ ಮೇಡಂ ಮಾತನಾಡಿ ವಿಶ್ವ ಮಾನಸಿಕ ಆರೋಗ್ಯದ ಜಾಗೃತಿ ಮೂಡಿಸಲು ಎಲ್ಲರು ದುಡಿಯಲು ಮುಂದಾಗಬೇಕು ಆಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಎಲ್ಲರನ್ನು ಜವಾಬ್ದಾರಿಯಿಂದ ಬದುಕಲು ಕರೆ ನೀಡಿದರು. ಅನಾರೋಗ್ಯದ ಲಕ್ಷಣಗಳು ಕಂಡು ಬಂದಲ್ಲಿ ಮನೋವೈದ್ಯರ ಬಳಿ ಚಿಕಿತ್ಸೆ ಪಡೆದುಕೊಳ್ಳಬೇಕು ಹಾಗೂ ಸಮುದಾಯದಲ್ಲಿ ಮೂಢನಂಬಿಕೆ ತೊಲಗಿಸಿ ಗಂಭೀರವಾಗಿ ಜೀವಿಸುವುದು ಒಳ್ಳೆಯದು ಅದಕ್ಕಾಗಿ ಉತ್ತಮ ಜೀವನ್ಶೈಲಿಯಿಂದ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ಹಾಗೂ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಹಾಗೂ ಆರ್ಬಿಟ್ ಸಂಸ್ಥೆಯ ಸಂಯೋಜಕರಾದ ರಫೀಕ್, ಸಿಸ್ಟರ್ ಲಿನೇಟ್, ಆಪ್ತ ಸಮಾಲೋಚಕರಾದ ರೂಪಾಲಿ ಸೇರಿ ಒಟ್ಟು 75 ಜನ ಭಾಗವಹಿಸಿದರು.

## “ಮಾನಸಿಕ ಆರೋಗ್ಯವು ದೈಹಿಕ ಆರೋಗ್ಯದಷ್ಟೇ ಮುಖ್ಯವಾಗಿದೆ”



23 ಅಕ್ಟೋಬರ 2025ರಂದು ಬೀದರ್ ತಾಲೂಕಿನ ಆಣದೂರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ, ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಮನೋವೈದ್ಯರಾದ ಡಾ. ಅಮಲ್ ಶರೀಫ್ ರವರು ಮಾತನಾಡಿ ವಿಶ್ವ ಮಾನಸಿಕ ಆರೋಗ್ಯ ದಿನದಂದು ನಾವು ಜಾಗೃತಿ ಮೂಡಿಸಲು ಒಟ್ಟುಗೂಡಿದ್ದೇವೆ. "ಮಾನಸಿಕ ಆರೋಗ್ಯವು ದೈಹಿಕ ಆರೋಗ್ಯದಷ್ಟೇ ಮುಖ್ಯವಾಗಿದೆ". ಇದು ಜೀವನದ ಸಾವಾಲುಗಳನ್ನು ಯೋಚಿಸುವ, ಅನುಭವಿಸುವ ಮತ್ತು ನಿರ್ವಹಿಸುವ ನಮ್ಮ ಸಾಮರ್ಥ್ಯದ ಮೇಲೆ ಪರಿಣಾಮ ಬೀಳುತ್ತದೆ. ಭಯ, ಆತಂಕ, ಖಿನ್ನತೆ ಮತ್ತು ನಿದ್ರಾಹೀನತೆಯಂತಹ ಲಕ್ಷಣಗಳು ಕಂಡುಬಂದಲ್ಲಿ ಮನೋವೈದ್ಯರ ಬಳಿ ಚಿಕಿತ್ಸೆ ಪಡೆದುಕೊಳ್ಳಬೇಕು. ಸಮುದಾಯದಲ್ಲಿ ಮೂಢನಂಬಿಕೆ ತೊಲಗಿಸಿ ಜಾಗೃತಿ ಮೂಡಿಸಬೇಕು. ಅತಿಯಾಗಿ ಮೊಬೈಲ್ ಬಳಕೆ ಮಾದಕ ವಸ್ತುಗಳ್ ಸೇವನೆಯಿಂದ ಮಾನಸಿಕ ಆರೋಗ್ಯ ಹಾಳಾಗುತ್ತದೆ. ಉತ್ತಮ ಜೀವನ್ಶೈಲಿಯಿಂದ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಧಿಕಾರಿಗಳಾದ ಡಾ.ವಿಜಯ್ ಸೂರ್ಯವಾಂಶಿ, ಮಲ್ಲಿಕಾರ್ಜುನ್ ಗುಡ್ಡೆ, ರಫೀಕ್ ಆನಂದ್ ಹಾಗೂ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಸೇರಿ ಒಟ್ಟು 80 ಜನ ಭಾಗವಹಿಸಿದರು.

## “ತುರ್ತು ಪರಿಸ್ಥಿತಿಯಲ್ಲಿ ಮತ್ತು ವಿಪತ್ತುಗಳಲ್ಲಿ ಮಾನಸಿಕ ಆರೋಗ್ಯ ಸೇವೆಗಳ ಲಭ್ಯತೆ”



ಭಾಲ್ಕಿ ತಾಲ್ಲೂಕ ಆಸ್ಪತ್ರೆಯಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಆರ್ಬಿಟ್ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯಕ್ರಮದ ವ್ಯವಸ್ಥಾಪಕಿಯಾದ ಸಿಸ್ಟರ್ ಕ್ರಿಸ್ಟಿನ ರವರು, ಫಾ. ರೆನಾಲ್ಡ್, CMO ಆದ ಡಾಕ್ಟರ್ ಅಬ್ದುಲ್ ಖದೀರ್, ಮನೋವೈದ್ಯರಾದ ಡಾಕ್ಟರ್ ಅಮಲ್ ಶರೀಫ್, BHEO ಚಂದ್ರಶೇಖರ್, ಕಾರ್ಯಕ್ರಮದ ಸಂಯೋಜಕರು ರಫೀಕ್, ಬ್ರದರ್ ಆನ್ನಿ ರವರು ಹಾಜರಿದರು. ಸಿಸ್ಟರ್ ಕ್ರಿಸ್ಟಿನಾ ರವರು ಈ ವರ್ಷದ ಮಾನಸಿಕ ಆರೋಗ್ಯದ ದಿನಾಚರಣೆ ಕುರಿತು ಮಾತನಾಡಿ ಆರ್ಬಿಟ್ ಸಂಸ್ಥೆಯ ನೆರವಿನ ಕುರಿತು ತಿಳಿಸುತ್ತಾ ಸುಖ ಜೀವನಕ್ಕೆ ಅವಶ್ಯ ವಾಗಿರುವುದು ಆಸ್ತಿಪಾಸ್ತಿಯಲ್ಲ ಬದಲಾಗಿ ಆರೋಗ್ಯ. ದೈಹಿಕ ಆರೋಗ್ಯ ಇದ್ದರೆ ಸಾಲದು ಮಾನಸಿಕ ಆರೋಗ್ಯ ಅತ್ಯಗತ್ಯ. ಆದರೆ ನಾವು ಅದನ್ನು ಅರಿಯದೇ ಇಂದು ಮಾನಸಿಕ ಆರೋಗ್ಯ ಕಳೆದುಕೊಳ್ಳುತ್ತಿದ್ದೇವೆ ಎಂದು ಆರೋಗ್ಯದ ಮಹತ್ವವನ್ನು ತಿಳಿಸುತ್ತ. ಈ ಆಚರಣೆಯು ನಮ್ಮಲ್ಲಿ ಜಾಗೃತಿ ಮೂಡಿಸುವ ದಿನವಾಗಬೇಕು, ಜೀವನಕ್ಕೆ ಬೆಳಕು ತರುವ ಸಾಧನ ವಾಗಬೇಕು, ಮನಸ್ಸಿಗೆ ನೆಮ್ಮದಿ ನೀಡುವ ಆಚರಣೆಯಾಗಬೇಕು ಎಂದು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಎಲ್ಲರಿಗೂ ಶುಭ ಹಾರೈಸಿದರು. ಈ ಕಾರ್ಯಕ್ರಮವನ್ನು ಸಸಿಗೆ ನೀರು ಎರೆಯುವ ಮೂಲಕ ಉದ್ಘಾಟಿಸಲಾಯಿತು. ಸಂಪನ್ಮೂಲ ವ್ಯಕ್ತಿಯಾದ ಡಾಕ್ಟರ್ ಅಮಲ್ ಶರೀಫ್ ರವರು ಮಾತನಾಡಿ ಒಳ್ಳೆಯ ಆರೋಗ್ಯ ಹೊಂದುವುದು ಎಲ್ಲರ ಆಲೋಚನೆ ಹಾಗೂ ಎಲ್ಲರ ಅಧಿಕಾರ. ಅದನ್ನು ಪಡೆದುಕೊಳ್ಳುವ ಅಭಿಲಾಷೆ ನಮ್ಮಲ್ಲಿ ಇರಬೇಕು ಆಗ ಮಾತ್ರ ಮಾನವ ಉತ್ತಮ ಜೀವನ ಜೀವಿಸಲು ಸಾಧ್ಯವಾಗುವುದು. ಅದನ್ನು ಉತ್ತಮವಾಗಿಸಲು ಸರಕಾರ ಹಾಗೂ ಆರ್ಬಿಟ್ ಸಂಸ್ಥೆಯವರು ಶ್ರಮಿಸುತ್ತಿರುವರು ಎಂದು ತಿಳಿಸಿದರು. BHEO ಚಂದ್ರಶೇಖರ್ ರವರು ಆರ್ಬಿಟ್ ಸೇವೆಯನ್ನು ಅಭಿನಂದಿಸುತ್ತ ವಿಶ್ವ ಮಾನಸಿಕ ದಿನಾಚರಣೆಯ ಮುಖ್ಯ ಗುರಿಯನ್ನು ಹಾಗೂ ಅದರಿಂದ ಪಡೆಯಬೇಕಾದ ಜಾಗೃತಿಯನ್ನು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 101 ಫಲಾನುಭವಿಗಳು ಹಾಗೂ ಭಾಲ್ಕಿ ತಾಲೂಕಿನ ಸಿಬ್ಬಂದಿ ವರ್ಗದವರು ಹಾಜರಿದ್ದರು.

## “ಗ್ರಾಮ ಪಂಚಾಯಿತಿಯಲ್ಲಿ ಮಾನಸಿಕ ಅಸ್ವಸ್ಥರ ದಿನಾಚರಣೆ”



ಹುಲಸೂರ ತಾಲೂಕಿನ ಹುಲಸೂರ ಗ್ರಾಮ ಪಂಚಾಯಿತಿಯಲ್ಲಿ ಮಾನಸಿಕ ಅಸ್ವಸ್ಥರ ದಿನಾಚರಣೆ ಆಚರಿಸಲಾಯಿತು. ಈ ಒಂದು ಕಾರ್ಯಕ್ರಮವನ್ನು ಸಸಿಗೆ ನೀರು ಎರೆಯುವ ಮೂಲಕ ಉದ್ಘಾಟಿಸಲಾಯಿತು. ಹುಲಸೂರ ಕೇಂದ್ರದ ಫಾದರ್ ಆರೋಗ್ಯ ದಾಸ್, ಕಾರ್ಯಕ್ರಮದ ವ್ಯವಸ್ಥಾಪಕಿಯಾದ ಸಿಸ್ಟರ್ ಕ್ರಿಸ್ಟೀನಾ, ವೈದ್ಯಾಧಿಕಾರಿಆದ ವಚನಶ್ರೀ ನೀಡೋದ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಪಂಚಾಯತ್ ಸಿಬ್ಬಂದಿ, ಫಲಾನುಭವಿಗಳು ಮತ್ತು ಸಂಸ್ಥೆಯ ಸಿಬ್ಬಂದಿ ವರ್ಗದವರು ಹಾಜರಿದ್ದರು. ಸಿಸ್ಟರ್ ಕ್ರಿಸ್ಟೀನಾ ರವರು ಜೀವನದಲ್ಲಿ ಉಂಟಾಗುವ ಏರುಪೇರುಗಳು ಹಾಗೂ ಅದು ನಮ್ಮ ಮಾನಸಿಕ ಆರೋಗ್ಯದ ಮೇಲೆ ಬೀರುವ ಪ್ರಭಾವದ ಕುರಿತು ತಿಳಿಸಿದರು. ಈ ಕಾರ್ಯಕ್ರಮದಿಂದ ಪ್ರತಿಯೊಬ್ಬರು ಒಳ್ಳೆಯ ಆರೋಗ್ಯ ಹೊಂದಿ ಉತ್ತಮ ಜೀವನ ನಡೆಸುವಂತೆ ಎಲ್ಲರಿಗೂ ಶುಭ ಹಾರೈಸಿ ಕಾರ್ಯಕ್ರಮವನ್ನು ಮುಕ್ತಾಯ ಗೊಳಿಸಲಾಯಿತು.

## “ವೀರಭದ್ರೇಶ್ವರ ಆರೈಕೆದಾರರ ಗುಂಪಿನ ಸಭೆ”



09 ಅಕ್ಟೋಬರ 2025 ರಂದು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತಯರಾದ ಶ್ರೀ ಮಹಾದೇವ ಅವರು ಬಸವಕಲ್ಯಾಣ ತಾಲೂಕಿನ ಹುಲಗುತ್ತಿ ಗ್ರಾಮದಲ್ಲಿ ವೀರಭದ್ರೇಶ್ವರ ಆರೈಕೆದಾರರ ಗುಂಪಿನ ಸಭೆಯನ್ನು ಮಾಡಲಾಯಿತು. ಸಭೆಯಲ್ಲಿ ಚರ್ಚಿಸಿದರು. ಆರೋಗ್ಯ ಸುಧಾರಣೆಯ ಬಗ್ಗೆ ಚರ್ಚೆಮಾರಿದರು. ಮಾನಸಿಕ ಅಸ್ವಸ್ಥರು ಎದುರಿಸುತ್ತಿರುವ ಸವಾಲುಗಳು ಮತ್ತು ಯಶಸ್ಸಿನ ಬಗ್ಗೆ ತಿಳಿಸಲಾಯಿತು. ಆರೋಗ್ಯದ ಪ್ರಾಮುಖ್ಯತೆ ಕುರಿತು ಲಭ್ಯವಿರುವ ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಯಿತು. ಮಾನಸಿಕ ಅಸ್ವಸ್ಥ ಸ್ಥಿತಿಯಲ್ಲಿರುವ ವ್ಯಕ್ತಿಗಳಿಗೆ ದಿನನಿತ್ಯ ಸಮಯಕ್ಕೆ ಸರಿಯಾಗಿ ಮಾತ್ರೆಗಳನ್ನು ಸೇವನೆ ಮಾಡುವಂತೆ ಪ್ರೇರೇಪಿಸಬೇಕು. ಅದೇ ರೀತಿ ಆರೈಕೆದಾರರು ತಮ್ಮ ಆರೋಗ್ಯದ ಪ್ರಾಮುಖ್ಯತೆ ವಹಿಸಬೇಕು. ಮಾನಸಿಕ ಅಸ್ವಸ್ಥರು ಪ್ರತಿ ದಿನ ಯೋಗ, ಧ್ಯಾನ ಮತ್ತು ಮನೆಯಲ್ಲಿನ ಸಣ್ಣ ಪುಟ್ಟ ಕೆಲಸ ಕಾರ್ಯಗಳನ್ನು ಮಾಡುವಂತೆ ನೋಡಿಕೊಳ್ಳುವುದು. ಈ ಆರೈಕೆದಾರರ ಗುಂಪಿನ ಸಭೆಯಲ್ಲಿ ಮಾನಸಿಕ ಅಸ್ವಸ್ಥರು ಮತ್ತು ಪೋಷಕರು ಹಾಗೂ ಆಶಾ ಕಾರ್ಯಕರ್ತೆ ಒಟ್ಟು 10 ಜನ ಹಾಜರಿದ್ದು ಮಾಹಿತಿಯನ್ನು ಪಡೆದುಕೊಂಡರು.

## “ಮಾನಸಿಕ ಅಸ್ವಸ್ಥ ಫಲಾನುಭವಿಗಳ ಆರೈಕೆದಾರರ ಗುಂಪನ್ನು ರಚನೆ”



07 ಅಕ್ಟೋಬರ 2025 ರಂದು ಬೀದರ್ ತಾಲೂಕಿನ ಬೆನಕನಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲೀವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥ ಫಲಾನುಭವಿಗಳ ಆರೈಕೆದಾರರ ಗುಂಪನ್ನು ರಚನೆ ಮಾಡಲಾಯಿತು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ನೋಹಾನ್ ರವರು ಈ ಗುಂಪಿಗೆ ಶಾಂತಿ ಆರೈಕೆದಾರರ ಸಂಘ ಎಂದು ಹೆಸರು ನೀಡಿದರು. ಈ ಸಂಘವನ್ನು ರಚಿಸುವುದರ ಮುಖ್ಯ ಉದ್ದೇಶ ಮಾನಸಿಕ ಅಸ್ವಸ್ಥರು ಸದೃಢವಾಗುವುದು, ಸ್ವಯಂ ಕ್ರಿಯಾಶೀಲರಾಗುವುದು, ತಮ್ಮ ದಿನನಿತ್ಯದ ಚಟುವಟಿಕೆಗಳನ್ನು ತಾನಾಗಿಯೇ ಮಾಡಿಕೊಳ್ಳುವುದು. ಈ ಕೆಳಕಂಡ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು: ಆರೋಗ್ಯ ಮತ್ತು ಯೋಗ ಕ್ಷೇಮ, ಆತ್ಮವಿಶ್ವಾಸ ಹೆಚ್ಚಿಸುವುದು, ಸಮುದಾಯದಲ್ಲಿ ಭಾಗವಹಿಸುವಿಕೆ, ಒಗ್ಗಟ್ಟು, ಸಾಮಾಜಿಕ ಮತ್ತು ಆರ್ಥಿಕ ಪ್ರಯೋಜನಗಳು. ಈ ಒಂದು ಮಾನಸಿಕ ಅಸ್ವಸ್ಥರ ಆರೈಕೆದಾರರ ಗುಂಪು ರಚನೆಯಲ್ಲಿ ಆಶಾ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿ ಸೇರಿ ಒಟ್ಟು 8 ಜನರು ಭಾಗವಹಿಸಿದರು.

## “ವಿಠ್ಠಲ ರುಕ್ಮಿಣಿ "ಆರೈಕೆದಾರರ ಸಂಘದ ಸಭೆ”



08 ಅಕ್ಟೋಬರ್ 2025ರಂದು ಬಸವಕಲ್ಯಾಣ ತಾಲೂಕಿನ ನಿರುಗುಡಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತಾಶ್ರಯದಲ್ಲಿ, "ವಿಠ್ಠಲ ರುಕ್ಮಿಣಿ "ಆರೈಕೆದಾರರ ಸಂಘದ ಸಭೆಯನ್ನು ಆಯೋಜಿಸಿ, ಈ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸಲಾಯಿತು. ಪ್ರತಿಯೊಬ್ಬ ಮಾನಸಿಕ ಅಸ್ವಸ್ಥ ಸ್ಥಿತಿಯಲ್ಲಿರುವ ವ್ಯಕ್ತಿಗೆ, ಪ್ರತಿನಿತ್ಯ ಸಮಯಕ್ಕೆ ಮಾತ್ರೆಗಳನ್ನು ಸೇವಿಸುವಂತೆ ನೋಡಿಕೊಳ್ಳುವುದು, ದಿನಾಲು ಯೋಗ, ಧ್ಯಾನ ಮಾಡಲು ಪ್ರೇರೇಪಿಸುವುದು ಅವಶ್ಯಕ ಎಂದು ತಿಳಿಸಲಾಯಿತು. ಶ್ರೀಮತಿ ಅಂಜನಾ ಬಾಯಿಯವರು ಯುಡಿಐಡಿ ಕಾರ್ಡ್‌ಗೆ ಅರ್ಜಿ ಸಲ್ಲಿಸುವುದರ ಮಾಹಿತಿ ಮತ್ತು ಶ್ರೀ ಸಂತೋಷ ರವರು ಮಾಸಿಕ ವೇತನಕ್ಕಾಗಿ ಅರ್ಜಿ ಸಲ್ಲಿ ಸುವ ಕುರಿತು ಮಾಹಿತಿ ನೀಡಿದರು. ಈ ಸಭೆಯಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ಆಶಾ ಕಾರ್ಯಕರ್ತರು ಒಟ್ಟು ಸೇರಿ 11 ಜನರು ಭಾಗವಹಿಸಿದ್ದರು.

## “ಮಾನಸಿಕ ರೋಗದಿಂದ ಬಳಲುತ್ತ ಜೀವನದಲಿ ಆರ್ಬಿಟ್ ಸಂಸ್ಥೆಯ ನೇರವು”



ಶೋಭಾಬಾಯಿ ಯವರು ಔರಾದ್ ತಾಲ್ಲೂಕಿನ ಕಾರಂಜಿ ತಾಂಡಾದ ನಿವಾಸಿ ಯಾಗಿದ್ದಾರೆ. ಇವರು ಸುಮಾರು 8 ವರ್ಷದಿಂದ ಮಾನಸಿಕ ರೋಗದಿಂದ ಬಳಲುತ್ತ ಜೀವನದಲ್ಲಿ ಹತಾಶರಾದಂತ ಸಮಯದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಸುನಿಲ್ ರವರು ಸಹಾಯಕ್ಕೆ ಬಂಧು ಸಮಯಕ್ಕೆ ಸರಿಯಾಗಿ DMHP ಕ್ಯಾಂಪಿಗೆ ಬರಲು ಸೂಚಿಸಿದರು. ಇವರು ಸತತವಾಗಿ ಕ್ಯಾಂಪ್ಗೆಬಂದು ಸಮಯಕ್ಕೆ ಸರಿಯಾಗಿ ಮಾತ್ರೆಗಳನ್ನು ತೆಗೆದುಕೊಂಡು ಗುಣಮುಖರಾಗಿದ್ದಾರೆ. ಹಾಗೂ ದಿನನಿತ್ಯದ ಕೆಲಸ ಕಾರ್ಯಗಳನ್ನು ತಾವು ಮಾಡುವಂಥ ಮನಸ್ಥಿತಿ ಹೊಂದಿದ್ದಾರೆ. ಹಾಗಾಗಿ ಇಂದು ಅವರು ಆರ್ಬಿಟ್ ಸಂಸ್ಥೆಗೆ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸಿದ್ದಾರೆ.

## "ಮಾನಸಿಕ ಆಸ್ವಸ್ಥರ ಆರೈಕೆದಾರರ ಸಭೆ"



ಔರಾದ್ ತಾಲೂಕಿನ ನಾಗಮರ್ಪಲಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯರಾದ ಶ್ರೀಮತಿ ದೀಪಿಕಾ ರವರು ಆರೈಕೆದಾರರ ಸಭೆ ನಡೆಸಿ ಹಲವು ವಿಷಯಗಳ ಕುರಿತು ಮಾಹಿತಿ ನೀಡಲಾಯಿತು. ಮೊದಲಿಗೆ ಆರೋಗ್ಯ ಸುಧಾರಣೆಯ ಬಗ್ಗೆ ಚರ್ಚೆ ಮಾಡಲಾಗಿ ಆರೋಗ್ಯವೇ ಭಾಗ್ಯ ಎಂಬಂತೆ ಪ್ರತಿಯೊಬ್ಬ ವ್ಯಕ್ತಿಯ ದೇಹ ಮತ್ತು ಮನಸ್ಸು ಸಂಪೂರ್ಣ ಸಮತೋಲನದಲ್ಲಿರುವ ಸ್ಥಿತಿಯನ್ನು ಆರೋಗ್ಯ ಎಂದು ಕರೆಯುತ್ತೇವೆ ಎಂದು ತಿಳಿಸಿದರು. ನಂತರ ಮಾನಸಿಕ ಅಸ್ವಸ್ಥರು ಇತ್ತೀಚಿಗೆ ಎದುರಿಸುತ್ತಿರುವ ಸವಾಲುಗಳ ಮಾಹಿತಿ ನೀಡಿದರು. ಸಮಾಜದಲ್ಲಿ ಇದುವರೆಗೂ ಮಾನಸಿಕ ಕಾಯಿಲೆಗೆ ಒಳಗಾದವರನ್ನು ಕೀಳಾಗಿ ಕಾಣುತ್ತಿದ್ದಾರೆ ಅದರಿಂದ ಅವರಿಗೆ ಇರುವ ಕಳಂಕವನ್ನು ಹೋಗಲಾಡಿಸಿ ಅವರು ಸಮಾಜದ ಮುಖ್ಯ ವಾಹಿನಿಗೆ ಬರುವುದು ನಮ್ಮ ಸಂಸ್ಥೆಯ ಉದ್ದೇಶವಾಗಿದೆ ಎಂದು ತಿಳಿಸಲಾಯಿತು. ಜೊತೆಗೆ ಮಾನಸಿಕ ಕಾಯಿಲೆಗೆ ಒಳಗಾದ ಎಷ್ಟು ವ್ಯಕ್ತಿಗಳು ಸುಧಾರಣೆಯಾಗಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ತೊಡಗಿದ್ದಾರೆ. ಆರೋಗ್ಯದ ಪ್ರಾಮುಖ್ಯತೆ. ವ್ಯಕ್ತಿಯು ತನ್ನ ಆರೋಗ್ಯವನ್ನು ತಾನೆ ಕಾಪಾಡಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಹೇಗಂದರೆ ಯೋಗ ಧ್ಯಾನ ಮತ್ತು ಪುಸ್ತಕಗಳನ್ನು ಓದುವುದು ಭಾವನಾತ್ಮಕವಾಗಿ ಸದೃಢವಾಗಿರಲು ಸಹಾಯವಾಗುತ್ತದೆ ಎಂದು ಮಾನಸಿಕ ಅಸ್ವಸ್ಥರ ಪಾಲಕ ಪೋಷಕರಿಗೆ ತಿಳಿಸಿ ಹೇಳಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು ಎಂಟು ಜನರು ಭಾಗವಹಿಸಿರುತ್ತಾರೆ.

## "ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆ"



ಬೀದರ್ ತಾಲೂಕಿನ ಹಿಪ್ಪಳಗಾವ್ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯನ್ನು ಶ್ರೀ. ನೋಹಾನ್ ರವರು ನಡೆಸಿದರು. ಈ ಸಭೆಗೆ ಬಂದ ಎಲ್ಲಾ ಆರೈಕೆದಾರರ ಆರೋಗ್ಯ ಕ್ಷೇಮವನ್ನು ವಿಚಾರಿಸಿ ಈ ಆರೈಕೆದಾರರ ಸಭೆಯ ಮುಖ್ಯ ಉದ್ದೇಶವನ್ನು ತಿಳಿಸಲಾಯಿತು. ನೆರೆದಿರುವ ಸರ್ವರಿಗೂ  ಒಗ್ಗಟ್ಟಿನಿಂದ ಮಾಡುವಂಥ ಸಾಧನೆ, ಪರಸ್ಪರ ಬೆಂಬಲ, ಅನುಭವಗಳ ಹಂಚಿಕೆ, ಮಾನಸಿಕ ಅಸ್ವಸ್ಥರ ಆರೋಗ್ಯ ಸಂರಕ್ಷಣೆ  ಕುರಿತು ತಿಳಿಸಲಾಯಿತು. ಇದರ ಜೊತೆಗೆ ಆರೋಗ್ಯ ಸುಧಾರಣೆಯ ಚರ್ಚೆ, ಇತ್ತೀಚಿನ ಸವಾಲುಗಳು ಮತ್ತು ಯಶಸ್ಸುಗಳು, ಲಭ್ಯ ಪಡಿಸಿಕೊಳ್ಳಲಾಗಿರುವ ಸರ್ಕಾರದ ಯೋಜನೆಗಳು ಮತ್ತು ಇತರೆ ಯೋಜನೆಗಳ ಮಾಹಿತಿ, ರೋಗಿಯೊಂದಿಗೆ ಸಂವಹನ ಮಾಡುವ ಉತ್ತಮ ಮಾರ್ಗಗಳ ಕುರಿತು ಚರ್ಚೆ ಮಾಡಲಾಯಿತು.ಈ ಸಭೆಯಲ್ಲಿ ಸಿಎಚ್‌ಓ ಪಿಎಚ್‌ಸಿಓ ಎಚ್‌ಸಿಓ, ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಫಲಾನುಭವಿಗಳು ಮತ್ತು ಆರೈಕೆದಾರರು ಸೇರಿ ಒಟ್ಟು 10 ಜನರು ಭಾಗವಹಿಸಿದರು.

## "ಸರಕಾರಿ ಆಸ್ಪತ್ರೆಯಲ್ಲಿ ಡಿಎಂಎಚ್‌ಪಿ ಕ್ಯಾಂಪ್"



28 ಅಕ್ಟೋಬರ್ 2025 ರಂದು ಬೀದರ್ ಸರಕಾರಿ ಆಸ್ಪತ್ರೆಯಲ್ಲಿ ಡಿಎಂಎಚ್‌ಪಿ ಕ್ಯಾಂಪ್ ಶಿಬಿರವನ್ನು ಆಯೋಜಿಸಲಾಯಿತು. ಈ ಶಿಬಿರದಲ್ಲಿ ಒಟ್ಟು 33 ಮಾನಸಿಕ ಅಸ್ವಸ್ಥರನ್ನು ಉಚಿತವಾಗಿ ತಪಾಸಣೆಯನ್ನು ಪಡೆದುಕೊಂಡರು ಅವರಿಗೆ ಆರ್ಬಿಟ್ ಕಾರ್ಯಕರ್ತರಿಂದ ಯುಡಿಐಡಿ ಕಾರ್ಡ್ ಮಾಡಿಸಿಕೊಡಲಾಯಿತು. ಈ ಮಾನಸಿಕ ಅಸ್ವಸ್ಥರನ್ನು ಉಚಿತ ತಪಾಸಣೆ ಮಾಡಿಸುವುದರ ಜೊತೆಗೆ 14416 ಕೌನ್ಸಿಲಿಂಗ್ ಮಾಡಿಸಲಾಯಿತು. ಅತಿ ಕಡು ಬಡುವರಾದಂತ ಮಾನಸಿಕ ವ್ಯಕ್ತಿಗಳನ್ನು ನಾವು ನಮ್ಮ ಆರ್ಬಿಟ್ ಸಂಸ್ಥೆ ವತಿಯಿಂದ ಬಸ್ ಚಾರ್ಜ್ ಕೂಡ ಕೊಟ್ಟು ಅದರ ಜೊತೆಗೆ ಅವರಿಗೆ ಪೆನ್ಷನ್ ಮತ್ತು ಸರ್ಕಾರದಿಂದ ಸೌಲತ್ತುಗಳನ್ನು ಒದಗಿಸಿ ಪ್ರತಿಯೊಬ್ಬ ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯನ್ನು ನಾವು ಚಿಕಿತ್ಸೆ ಕೊಡುವುದರಲ್ಲಿ ಮುಂದಾಗಿದ್ದೇವೆ.

## "ವಿಶೇಷ ಚೇತನರ ಸಭೆ 5% ಅನುದಾನ"



24 ಅಕ್ಟೋಬರ್ 2025 ರಂದು ಭಾಲ್ಕಿ ತಾಲೂಕಿನ ಉಚ್ಚ ಗ್ರಾಮದಲ್ಲಿ ವಿಶೇಷ ಚೇತನರ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಯುಡಿಐಡಿ ಕಾರ್ಡ್, 5% ಅನುದಾನ, ಮಾಸಿಕ ವೇತನದ ಕುರಿತು ಚರ್ಚಿಸಲಾಯಿತು. ವಿಶೇಷ ಚೇತನರು ಎಂದು ಗುರುತಿಸಲು ಹಾಗೂ ಅವರಿಗೆ ಸರ್ಕಾರದಿಂದ ಸಿಗುವ ಸೌಲತ್ತುಗಳನ್ನು ಪಡೆಯುವ ಹಂತಗಳ ಮಾಹಿತಿ ನೀಡಲಾಯಿತು. ಗ್ರಾಮ ಪಂಚಾಯಿತಿಯಲ್ಲಿ ವಿಶೇಷ ಚೇತನರಿಗೆ 5% ಅನುದಾನವಿದೆ ಅದರ ಉಪಯೋಗವನ್ನು ಪಡೆದುಕೊಳ್ಳುವುದು. ತಮ್ಮ ಅಧಿಕಾರ ಅದನ್ನು ಯಾರು ಸಲ್ಲಿಸುವಂತಿಲ್ಲ ಎಂದು ಅವರ ಹಕ್ಕುಗಳ ಮಾಹಿತಿಯ ಅರಿವು ಮೂಡಿಸಲಾಯಿತು. ಈ ಸಭೆಯಲ್ಲಿ 10 ಜನರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## “ತಾಲೂಕಾ ಪಂಚಾಯತ್ ಸಭಾಂಗಣದಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ”



10 ಅಕ್ಟೋಬರ್ 2025 ರಂದು ಬಸವಕಲ್ಯಾಣ ತಾಲೂಕಾ ಪಂಚಾಯತ್ ಸಭಾಂಗಣದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತಾಶ್ರಯದಲ್ಲಿ ಶ್ರೀ ವಿಜಯಕುಮಾರ್ ರವರು ಗ್ರಾಮ ಪಂಚಾಯತ್ ಸದಸ್ಯರುಗಳಿಗೆ ವಿಶ್ವ ಮಾನಸಿಕ ಆರೋಗ್ಯ ದಿನದಂದು ಕುರಿತು ಜಾಗೃತಿ ಮೂಡಿಸಿದರು. ಪ್ರತಿ ಮನುಷ್ಯನಿಗೆ ದೈಹಿಕ ಆರೋಗ್ಯ ಎಷ್ಟು ಮುಖ್ಯ ವಾಗಿದೆಯೋ, ಹಾಗೆಯೇ ಮಾನಸಿಕ ಆರೋಗ್ಯವು ಕೂಡ ಮುಖ್ಯವಾಗಿದೆ, ಆತಂಕ, ಖಿನ್ನತೆ, ಭಯ, ನಿದ್ರೆ ಹೀನತೆ ಹಾಗೂ ಒತ್ತಡ ಇಂತಹ ಲಕ್ಷಣಗಳು ಕಂಡು ಬಂದರೆ, ಮನೋವೈದ್ಯರನ್ನು ಸಂಪರ್ಕಿಸಿ ಉಚಿತವಾದ ಚಿಕಿತ್ಸೆ ಪಡೆದುಕೊಳ್ಳಬಹುದು. ಹಳ್ಳಿ ಜನರು ಮೂಢನಂಬಿಕೆಗಳಿಗೆ ಒಳಗಾಗದಂತೆ ವೈಜ್ಞಾನಿಕವಾದ ಚಿಕಿತ್ಸೆಗೆ ಸ್ಪಂದಿಸದರೆ ಮಾನಸಿಕ ಕಾಯಿಲೆಯಿಂದ ಗುಣ ಮುಕ್ತರಾಗಬಹುದು ಎಂದು ತೀಳಿಸಿದರು. ಹಾಗೂ ಮಾನಸಿಕ ಅಸ್ವಸ್ಥರಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳ ಬಗ್ಗೆ ಮಾಹಿತಿ ನೀಡಿ ಯುಡಿಐಡಿ ಕಾರ್ಡ್, ಮಾಸಿಕ ವೇತನ, ಗ್ರಾಮ್ ಪಂಚಾಯತ್‌ನಿಂದ ಸರ್ಕಾರ ಉದ್ಯೋಗ, 5% ಅನುದಾನದಲ್ಲಿ ಮೀಸಲಾತಿ ಕಲ್ಪಿಸಲಾಗುವುದು ಎಂದು ಸಂಸ್ಥೆ ವತಿಯಿಂದ ಪತ್ತೆ ಹಚ್ಚಿದ ಮಾನಸಿಕ ಅಸ್ವಸ್ಥರ ಮಾಹಿತಿ ನೀಡಿ ತಮ್ಮ ಸಹಕಾರ ಕೋರಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 72 ಜನರು ಭಾಗವಹಿಸಿದರು.

## “ಗ್ರಾಮ ಪಂಚಾಯತ್ ಸದಸ್ಯರಿಗೆ ಸಂಪರ್ಕ ಸಂವಾದ ಸಭೆ”




17 ಅಕ್ಟೋಬರ್ 2025 ರಂದು ಬಸವಕಲ್ಯಾಣ ತಾಲೂಕಿನ ಧನ್ನೂರ (ಕೆ) ಗ್ರಾಮ ಪಂಚಾಯತನಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಕಾರ್ಯಕ್ರಮದ ಎಲ್.ಎಲ್.ಎಲ್.ಎಫ್ ಸಂಯುಕ್ತ ಆಶ್ರಯದಲ್ಲಿ ಗ್ರಾಮ ಪಂಚಾಯತ್ ಸದಸ್ಯರಿಗೆ ಸಂಪರ್ಕ ಸಂವಾದ ಸಭೆಯನ್ನು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಮಹಾದೇವ ಮಾನಕಾರೆ ರವರು ನಡೆಸಿದರು. ಈ ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆ ಪರಿಚಯ, ಮಾನಸಿಕ ಆರೋಗ್ಯ ಕಾರ್ಯಕ್ರಮ ಕುರಿತು ಗ್ರಾಮ ಪಂಚಾಯತ್ ಸದಸ್ಯರು ಮತ್ತು ಗ್ರಾಮೀಣ ಪೂನರ್ವಸತಿ ಕಾರ್ಯಕರ್ತರು ಸಂಘ ಸಂಸ್ಥೆಗಳ ಸಹಯೋಗದ ಪ್ರಯತ್ನಗಳ ಮೂಲಕ ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ಹಾಗೂ ಬೆಂಬಲ ನೀಡುವುದು. ಆರೋಗ್ಯ ಸಂಪನ್ಮೂಲಗಳನ್ನು ಬಳಸುವುದು, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಲ್ಲಿ ಉಚಿತ ತಪಾಸಣೆ, ಆಪ್ತಸಮಾಲೋಚನೆ ಮತ್ತು ಮಾತ್ರೆಗಳ ಸೌಲಭ್ಯ, ಸಮುದಾಯ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಮಾನಸಿಕ ಅಸ್ವಸ್ಥರಿಗೆ ಮತ್ತು ಪೋಷಕರಿಗೆ ಸಹಕಾರ ಬೆಂಬಲ ನೀಡುವುದು, ಪಂಚಾಯತ್ ಸಭೆಯಲ್ಲಿ ಮಾನಸಿಕ ಆರೋಗ್ಯ ಹಾಗೂ ವಿಶೇಷ ಚೇತನರಿಗೆ ಮೀಸಲಿಟ್ಟ 5% ಅನುದಾನ ಬಳಕೆ ಕುರಿತು ಮಾಹಿತಿ ನೀಡಲಾಯಿತು. ಈ ತರಬೇತಿಯಲ್ಲಿ ಪಂಚಾಯತ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಸೇರಿ ಒಟ್ಟು 18 ಜನರು ಭಾಗವಹಿಸಿ ಮಾಹಿತಿ ಪಡೆದರು.

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



24 ಅಕ್ಟೋಬರ್ 2025 ರಂದು ಔರಾದ್ ತಾಲೂಕಿನಲಿ ನಜರೆತ್ ಕಾಲೋನಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ಲಿವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ದೀಪಿಕಾ ರವರು ಮಾನಸಿಕ ಅಸ್ವಸ್ಥರ ಕುರಿತು ಮಾತನಾಡಿದರು. ಮಾನಸಿಕ ಕಾಯಿಲೆಯು ಒಂದು ಮೆದುಳಿನ ಕಾಯಿಲೆಯಾಗಿದೆ. ಈ ಕಾಯಿಲೆಯನ್ನು ಚಿಕಿತ್ಸೆಯ ಮೂಲಕವಾಗಿ ಗುಣಪಡಿಸಬಹುದು. ಆದರೆ ಜನರು ಈ ಒಂದು ಮಾನಸಿಕ ಕಾಯಿಲೆಯ ಬಗ್ಗೆ ಸರಿಯಾದ ಮಾಹಿತಿಯನ್ನು ಹೊಂದಿಲ್ಲ. ಯಾರಾದರೂ ಮಾನಸಿಕವಾಗಿ ವರ್ತಿಸಿದರೆ ಇದು ಭಾನಮತಿ ಇಲ್ಲವೇ ದೆವ್ವ ಕಾಟ ಎಂಬ ಭ್ರಮೆಯಲ್ಲಿ ಜನರು ಇದ್ದಾರೆ. ಆದರೆ ಈ ಮಾನಸಿಕ ಕಾಯಿಲೆಯನ್ನು ಚಿಕಿತ್ಸೆಯ ಮೂಲಕವಾಗಿ ಗುಣಪಡಿಸಬಹುದು. ತಜ್ಞರ ಬಳಿಗೆ ಅವರನ್ನು ಕರಕೊಂಡು ಹೋಗಿ ಸರಿಯಾದ ರೀತಿಯಲ್ಲಿ ಅವರಿಗೆ ಚಿಕಿತ್ಸೆಯನ್ನು ನೀಡಿದರೆ ಅವರು ಸಂಪೂರ್ಣವಾಗಿ ಗುಣಮುಖರಾಗುತ್ತಾರೆ. ಪ್ರತಿ ತಿಂಗಳ ಮೊದಲನೆಯ ಮಂಗಳವಾರ ಔರಾದ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತಜ್ಞರು ಬರುತ್ತಾರೆ. ಮಾನಸಿಕವಾಗಿ ಬಳಲುತ್ತಿರುವವರಿಗೆ ಉಚಿತ ತಪಾಸಣೆ ಮತ್ತು ಉಚಿತ ಚಿಕಿತ್ಸೆ ನೀಡಲಾಗುವುದು ಎಂದು ಸಮುದಾಯದ ಜನರಿಗೆ ಜಾಗೃತಿಯನ್ನು ಮೂಡಿಸಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಒಟ್ಟು 15 ಜನರು ಭಾಗವಹಿಸಿದರು.

## “ವಿಶೇಷ ಚೇತನರ ಸಭೆ ಹಕ್ಕುಗಳು ಹಾಗೂ ಕರ್ತವ್ಯಗಳ ಕುರಿತು ಜಾಗೃತಿ”



10 ಅಕ್ಟೋಬರ್ 2025 ರಂದು ಬೀದರ್ ತಾಲೂಕಿನ ಕಂಗಟಿ ಗ್ರಾಮದಲ್ಲಿ ವಿಶೇಷ ಚೇತನರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ಲಿವ್.ಲವ್.ಲಾಫ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನೋಹಾನ್ ರವರು ವಿಶೇಷ ಚೇತನರನ್ನು ಉದ್ದೇಶಿಸಿ ಮಾತನಾಡಿದರು. ಸಭೆಗೆ ಬಂದವರ ಆರೋಗ್ಯವನ್ನು ವಿಚಾರಿಸಿ ಅವರಿಗೆ ತಮ್ಮ ಹಕ್ಕುಗಳು ಹಾಗೂ ಕರ್ತವ್ಯಗಳ ಕುರಿತು ತಿಳಿಸಿದರು. ಸರ್ಕಾರದಿಂದ ಸಿಗುವಂತಹ 5% ಪ್ರತಿಶತ ಸೌಲಭ್ಯಗಳ ಕುರಿತು, ಯುಡಿಐಡಿ ಕಾರ್ಡ್, ಮಾಸಿಕ ಪಿಂಚಣಿ, ವೃದ್ಯಾಪ ವೇತನ, ಸೌಲಭ್ಯಗಳನ್ನು ಉಚಿತವಾಗಿ ಪಡೆದುಕೊಳ್ಳಬೇಕು. ಹಾಗೆಯೇ ಸರ್ಕಾರದಿಂದ ತಮ್ಮೆಲ್ಲರಿಗೂ ಸಿಗುವಂತ ಎಲ್ಲ ಸೌಲಭ್ಯಗಳನ್ನು ತಾವುಗಳು ಪಡೆದುಕೊಳ್ಳಬೇಕೆಂಬುದಾಗಿ ಸಭೆಯಲ್ಲಿ ತಿಳಿಸಿದರು. ಈ ಸಭೆಯಲ್ಲಿ ಸರ್ಕಾರಿ ಯೋಜನೆಗಳ ಮಾಹಿತಿ ಮತ್ತು ಅನುಷ್ಠಾನ, ಅವರು ಎದುರಿಸುತ್ತಿರುವ ಸವಾಲುಗಳು, ಸಂಘಟನೆಯಲ್ಲಿ ಸಂಪನ್ಮೂಲ ಕ್ರೋಢೀಕರಣ, ಸರ್ಕಾರದ ಸಾಲ ಸೌಲಭ್ಯಗಳು ಮತ್ತು ಸಬ್ಸಿಡಿಗಳ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿ ಸೇರಿ ಒಟ್ಟು 09 ಜನರು ಭಾಗವಹಿಸಿದರು.

## “ಭಾಗ್ಯಲಕ್ಷ್ಮಿ ವಿಶೇಷ ಚೇತನರ ಸಭೆ”



08 ಅಕ್ಟೋಬರ್ 2025 ರಂದು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ರವರು ಬೀದರ್ ತಾಲೂಕಿನ ಸುಲ್ತಾನಪುರ ಗ್ರಾಮದಲ್ಲಿ ಭಾಗ್ಯಲಕ್ಷ್ಮಿ ವಿಶೇಷ ಚೇತನರ ಸಭೆ ನಡೆಸಲಾಯಿತು. ಈ ಸಭೆಯಲ್ಲಿ 7 ಜನರು ಭಾಗವಹಿಸಿದ್ದು. ಮೊದಲು ಸಮಾನತೆ ಮತ್ತು ಹಕ್ಕುಗಳ ಬಗ್ಗೆ ಮಾಹಿತಿ ತಿಳಿಸಲಾಯಿತು. ನಿಮ್ಮ ಗುಂಪಿನಲ್ಲಿ ಒಗ್ಗಟ್ಟುತನ ಬಹಳ ಮುಖ್ಯ. ಯಾರಿಗೆಲ್ಲ ಸೌಲಭ್ಯಗಳು ದೊರಕಿಲ್ಲ ನಿಮ್ಮ ಒಂದು ಗುಂಪಿನಿಂದ ಮೇಲಾಧಿಕಾರಿಗಳಿಗೆ ಮಾಹಿತಿ ತಿಳಿಸಿ ಪಡೆದುಕೊಳ್ಳಬಹುದು. ಪ್ರತಿಯೊಬ್ಬರಲ್ಲಿ ಸರ್ಕಾರಿ ಸೌಲಭ್ಯಗಳು ಹಾಗೂ ಸರ್ಕಾರಿ ದಾಖಲತೆಗಳು ತುಂಬಾ ಪ್ರಾಮುಖ್ಯವಾಗಿದೆ. ಹಾಗಾಗಿ ಪಂಚಾಯಿತಿನ 5% ಅನುದಾನ, ವಿಶೇಷ ಚೇತನರಿಗೋಸ್ಕರ ಯುಡಿಐಡಿ ಕಾರ್ಡ್, ಮನೆಯಲ್ಲಿ ಪಾಲನೆ ಪೋಷಣೆ ಮಾಡುವವರಿಗೆ ತಿಂಗಳಿಗೆ 1000 ಆದಾಯ ಸಿಗುತ್ತಿದೆ ಎಂದು ಅನೇಕ ವಿಷಯಗಳ ಕುರಿತು ಮಾಹಿತಿಯನ್ನು ತಿಳಿಸಿದರು.

## “ಮಹಾಜೋತಿ ವಿಶೇಷ ಚೇತನರ




13 ಅಕ್ಟೋಬರ್ 2025 ರಂದು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅಭಿಷೇಕ್ ರವರು ಬೀದರ್ ತಾಲೂಕಿನ ಎದ್ಲಾಪುರ್ ಗ್ರಾಮದಲ್ಲಿ ಮಹಾಜೋತಿ ಗುಂಪಿನ ವಿಶೇಷ ಚೇತನರ ಸಭೆ ನಡೆಸಲಾಯಿತು. ಸಭೆಯಲ್ಲಿ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು. ಮೊದಲು ಸಮಾನತೆ ಮತ್ತು ಹಕ್ಕುಗಳ ಬಗ್ಗೆ ಮಾಹಿತಿ ತಿಳಿಸಲಾಯಿತು. ಗುಂಪಿನಲ್ಲಿ ಒಗ್ಗಟ್ಟುತನ ಬಹಳ ಮುಖ್ಯ. ಯಾರಿಗೆಲ್ಲ ಸೌಲಭ್ಯಗಳು ದೊರಕಿಲ್ಲ ನಿಮ್ಮ ಒಂದು ಗುಂಪಿನಿಂದ ಮೇಲಾಧಿಕಾರಿಗಳಿಗೆ ಮಾಹಿತಿ ತಿಳಿಸಿ ಪಡೆದುಕೊಳ್ಳಬಹುದು. ಆತ್ಮವಿಶ್ವಾಸ ಬಹಳ ಮುಖ್ಯ. ಪ್ರತಿಯೊಬ್ಬರಲ್ಲಿ ಸರ್ಕಾರಿ ಸೌಲಭ್ಯಗಳು ಹಾಗೂ ಸರ್ಕಾರಿ ದಾಖಲತೆಗಳು ತುಂಬಾ ಪ್ರಾಮುಖ್ಯತೆವಾಗಿದೆ. ಪಂಚಾಯಿತಿಯಿಂದ 5% ಅನುದಾನದ ಕುರಿತು ಸೌಲಭ್ಯಗಳು ಮೊದಲು ಪಡೆದುಕೊಳ್ಳುವುದು. ವಿಶೇಷ ಚೇತನರಿಗೋಸ್ಕರ ಯಾರಿಗೆಲ್ಲ ಯುಡಿಐಡಿ ಕಾರ್ಡ್, 75% ಮೇಲ್ಪಟ್ಟು ಹೊಂದಿದ್ದಾರೆ ಅವರಿಗೆ ಅವರ ಮನೆಯಲ್ಲಿ ಪಾಲನೆ ಪೋಷಣೆ ಮಾಡುವವರಿಗೆ ತಿಂಗಳಿಗೆ 1000 ಆದಾಯ ಸಿಗುತ್ತಿದೆ ಅದನ್ನು ಕೂಡ ಪಡೆದುಕೊಳ್ಳಬೇಕು ಎಂದು ತಿಳಿಸಲಾಯಿತು. ಈ ಸಭೆಯಲ್ಲಿ ಒಟ್ಟು 8 ಜನರು ಭಾಗವಹಿಸದರು.

## “ಸಾರ್ವಜನಿಕ ಆಸ್ಪತ್ರೆಯಲ್ಲಿ ಡಿಎಂಎಚ್‌ಪಿ ಶಿಬಿರ”



14 ಅಕ್ಟೋಬರ್ 2025ರಂದು ಭಾಲ್ಕಿ ತಾಲೂಕು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆದ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಿಂದ ಪತ್ತೆ ಹಚ್ಚಿದ ಒಟ್ಟು 90 ಮಾನಸಿಕ ಅಸ್ವಸ್ಥ ಫಲಾನುಭವಿಗಳನ್ನು ವಿಚಾರಿಸಿ, ಮನೋವೈದ್ಯರ ಬಳಿ ಚಿಕಿತ್ಸೆಗೆ ಒಳಪಡಿಸಿ, ಮಾತ್ರೆಗಳನ್ನು ಕೊಡಿಸಲಾಯಿತು. ಇದರ ಜೊತೆ ಅವರಿಗೆ ಆರೋಗ್ಯ ಕಾರ್ಡ್ ಮತ್ತು ಇತರೆ ಸರ್ಕಾರಿ ಸೌಲಭ್ಯಗಳ ಮಾಹಿತಿ ನೀಡಿ ಅವುಗಳನ್ನು ಲಭ್ಯವಾಗಿಸಲಾಯಿತು.

## "ಸಮುದಾಯ ಆರೋಗ್ಯ ಅಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆಯರಿಗೆ ಪಾಲುದಾರರ ತರಬೇತಿ"



4 ಅಕ್ಟೋಬರ್ 2025 ರಂದು ಬೀದರ ತಾಲೂಕಿನ ನೌಬಾದ್ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲೀವ್,ಲವ್,ಲಾಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ವೈದ್ಯಾಧಿಕಾರಿಗಳು, ಸಮುದಾಯ ಆರೋಗ್ಯ ಅಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆ ಯರಿಗೆ ಪಾಲುದಾರರ ತರಬೇತಿಯನ್ನು ಆರ್ಬಿಟ್ ಸಂಸ್ಥೆಯ ಸಮುದಾಯ ಕಾರ್ಯಕರ್ತೆಯರಾದ ಶ್ರೀಮತಿ ಪ್ರಿಯಾ ಹಾಗೂ ರೂಪಾಲಿ ಆಪ್ತ ಸಮಾಲೋಚಕರು ಮಾಹಿತಿಯನ್ನು ನೀಡಿದರು. ಈ ತರಬೇತಿಯಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ ಕುರಿತು, ಮಾನಸಿಕ ಅಸ್ವಸ್ಥರಿಗೆ ಸಮಾಜದಲ್ಲಿ ಇರುವ ಕಳಂಕವನ್ನು ಕಡಿಮೆ ಮಾಡುವುದು ಮತ್ತು ಸಮುದಾಯದೊಳಗೆ ಧನಾತ್ಮಕ ಮಾನಸಿಕ ಆರೋಗ್ಯ ಅಭ್ಯಾಸಗಳನ್ನು ಉತ್ತೇಜಿಸುವುದು. ಆಶಾ ಕಾರ್ಯಕರ್ತೆಯರು ಮತ್ತು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಸಂಘ ಸಂಸ್ಥೆಗಳ ಸಹಯೋಗದ ಪ್ರಯತ್ನಗಳ ಮೂಲಕ ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ಹಾಗೂ ಬೆಂಬಲ ನೀಡುವುದು. ಆರೋಗ್ಯ ಸಂಪನ್ಮೂಲಗಳನ್ನು ಬಳಸುವುದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಲ್ಲಿ ಉಚಿತ ತಪಾಸಣೆ, ಆಪ್ತಸಮಾಲೋಚನೆ ಮತ್ತು ಮಾತ್ರೆಗಳ ಸೌಲಭ್ಯ ಒಳಗೊಂಡಿರುತ್ತದೆ. ಸಮುದಾಯ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು. ಮಾನಸಿಕ ಅಸ್ವಸ್ಥರಿಗೆ ಮತ್ತು ಪೋಷಕರಿಗೆ ಸಹಕಾರ ಬೆಂಬಲ ನೀಡುವುದು. ಈ ತರಬೇತಿಯಲ್ಲಿ ವೈದ್ಯಾಧಿಕಾರಿಗಳು, ಆರೋಗ್ಯ ಅಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರನ್ನು ಒಳಗೊಂಡು ಒಟ್ಟು 18 ಜನ ಭಾಗವಹಿಸಿ ಮಾಹಿತಿಯನ್ನು ಪಡೆದರು.

## "ಸೈಕೋ–ಸೋಶಿಯಲ್ ಎಜುಕೇಶನ್ ತರಬೇತಿ"



ಬೀದರ್ ಜಿಲ್ಲೆಯ ಅಣದೂರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 23 ಅಕ್ಟೋಬರ್ 2025 ರಂದು ಆರ್ಬಿಟ್ ಸಂಸ್ಥೆಯ ಲೀವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ರೂಪಾಲಿ ಯವರು ಜೀವನ ಆಧಾರಿತ ತರಬೇತಿ ಆಯೋಜಿಸಿದರು. ಇದರಲ್ಲಿ ಸೈಕೋ–ಸೋಶಿಯಲ್ ಎಜುಕೇಶನ್ ತರಬೇತಿ ಎಂದರೆ ಏನು ಎನ್ನುವುದನ್ನು ಮನವರಿಕೆ ಮಾಡುತ್ತಾ, ವ್ಯಕ್ತಿಯ ಮನಸ್ಸು (Psychological) ಮತ್ತು ಸಮಾಜದೊಡನೆ ಇರುವ ಸಂಬಂಧಗಳು (Social) ಎರಡನ್ನೂ ಒಳಗೊಂಡ ರೀತಿಯಲ್ಲಿ, ಅವನ ಭಾವನೆ, ನಡವಳಿಕೆ, ಆತ್ಮವಿಶ್ವಾಸ, ಸಾಮಾಜಿಕ ಕೌಶಲ್ಯಗಳು ಹಾಗೂ ಜೀವನ ಮೌಲ್ಯಗಳು ಇವುಗಳನ್ನು ಬೆಳೆಸುವ ತರಬೇತಿ. ತರಬೇತಿಯ ಉದ್ದೇಶಗಳು:– ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು, ಆತ್ಮವಿಶ್ವಾಸ ಮತ್ತು ಆತ್ಮಸಮಾನತೆ ಬೆಳೆಸುವುದು, ಸಾಮಾಜಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು, ಒತ್ತಡ ಮತ್ತು ಸಂಕಟ ನಿರ್ವಹಣೆ ಕಲಿಸುವುದು, ಸಕಾರಾತ್ಮಕ ಜೀವನದ ದೃಷ್ಟಿಕೋನ ನಿರ್ಮಾಣ ಹಾಗೂ ಸಹಾನುಭೂತಿ ಮತ್ತು ಸಹಕಾರ ಮನೋಭಾವವನ್ನು ಅಭಿವೃದ್ಧಿಪಡಿಸುವುದು. ತರಬೇತಿಯ ಪ್ರಮುಖ ಅಂಶಗಳು:– ಸ್ವ–ಜ್ಞಾನ, ತನ್ನ ಭಾವನೆಗಳು, ಬಲಹೀನತೆಗಳು ಮತ್ತು ಬಲಗಳನ್ನು ಅರಿತುಕೊಳ್ಳುವುದು. ಭಾವನಾತ್ಮಕ ಬುದ್ಧಿಮತ್ತೆ ತನ್ನ ಹಾಗೂ ಇತರರ ಭಾವನೆಗಳನ್ನು ಗುರುತಿಸಿ, ಸರಿಯಾದ ರೀತಿಯಲ್ಲಿ ಪ್ರತಿಕ್ರಿಯಿಸುವ ಕೌಶಲ್ಯ ಬೆಳೆಸುವುದು. ಸಂವಹನ ಕೌಶಲ್ಯಗಳು, ಪರಿಣಾಮಕಾರಿಯಾಗಿ ಮಾತನಾಡುವುದು, ಕೇಳುವುದು ಮತ್ತು ಅಭಿಪ್ರಾಯ ಹಂಚಿಕೊಳ್ಳುವುದು. ಸಾಮಾಜಿಕ ಕೌಶಲ್ಯಗಳು ತಂಡದಲ್ಲಿ ಕೆಲಸ ಮಾಡುವುದು, ಸಂಘರ್ಷ ಪರಿಹರಿಸುವುದು ಮತ್ತು ಸ್ನೇಹ ಬೆಳೆಸುವುದು. ಒತ್ತಡ ಹಾಗೂ ಸಂಕಟ ನಿರ್ವಹಣೆ, ಜೀವನದ ಸವಾಲುಗಳನ್ನು ಸಮತೋಲನದಿಂದ ಎದುರಿಸುವ ಪಾಠ ಕಲಿಸುವುದು. ಮೌಲ್ಯ ಶಿಕ್ಷಣ, ನೈತಿಕತೆ, ಗೌರವ, ಸಹಾನುಭೂತಿ ಮತ್ತು ಮಾನವೀಯತೆ ಬೆಳೆಸುವುದು. ಮಾನಸಿಕ ಆರೋಗ್ಯದಲ್ಲಿ ಸುಧಾರಣೆ, ಉತ್ತಮ ಮಾನವ ಸಂಬಂಧಗಳ ನಿರ್ಮಾಣ, ಕಲಿಕೆಯ ಉತ್ಸಾಹ ಮತ್ತು ಸಾಮರ್ಥ್ಯದಲ್ಲಿ ಬೆಳವಣಿಗೆ, ಶಾಂತ ಮತ್ತು ಸಹಕಾರದ ಸಂಸ್ಥಾ ವಾತಾವರಣ ನಿರ್ಮಾಣ, ಆತ್ಮವಿಶ್ವಾಸದ ಹಾಗೂ ಜವಾಬ್ದಾರಿಯುತ ನಾಗರಿಕರ ರೂಪಣ ಎಂದು ವಿವರಿಸಿದರು. ಈ ತರಬೇತಿಯಲ್ಲಿ ಒಟ್ಟು 35 ರಿಂದ 40 ಫಲಾನುಭವಿಗಳು ಸಕ್ರಿಯವಾಗಿ ಭಾಗವಹಿಸಿದ್ದರು.

## "ಸಾರ್ವಜನಿಕ ಆಸ್ಪತ್ರೆಯಲ್ಲಿ ಡಿಎಂಎಚ್‌ಪಿ ಶಿಬಿರ"



07 ಅಕ್ಟೋಬರ್ 2025 ರಂದು ಬಸವಕಲ್ಯಾಣ ತಾಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಿಎಂಎಚ್‌ಪಿ ಶಿಬಿರ ನಡೆಸಲಾಗಿತ್ತು. ಅನೇಕ ಮಾನಸಿಕ ಅಸ್ವಸ್ಥಯ ವ್ಯಕ್ತಿಗಳು ಶಿಬಿರದಲ್ಲಿ ಭಾಗವಹಿಸಿ ಉತ್ತಮ ಆರೋಗ್ಯ ಪಡೆಯುವಲ್ಲಿ ಮುಂದಾಗಿದ್ದಾರೆ. ಇವರಿಗೆ ತಮ್ಮ ಆರೋಗ್ಯವನ್ನು ಉತ್ತಮ ಗೊಳಿಸುವ ಅನೇಕ ವಿಧಿ ವಿಧಾನಗಳನ್ನು, ಕೋಪದ ನಿಯಂತ್ರಣ, ಕುಟುಂಬದ ಪಾತ್ರ ಹೀಗೆ ಹಲವಾರು ವಿಷಯಗಳ ಕುರಿತು ತಿಳಿಸಿ ಕೊಡಲಾಯಿತು.

## "ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ"



27 ಅಕ್ಟೋಬರ್ 2025ರಂದು ಔರಾದ ತಾಲೂಕಿನ ಬೊಂತಿ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ಲಿವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಸುನಿಲ್ ರವರು ಮಾನಸಿಕ ಕಾಯಿಲೆಯ ಕುರಿತು ಮಾತನಾಡಿದರು. ಮೊದಲಿಗೆ ಆರ್ಬಿಟ್ ಸಂಸ್ಥೆಯ ಪರಿಚಯವನ್ನು ನೀಡಿ ನಂತರದಲ್ಲಿ ಮಾನಸಿಕ ಕಾಯಿಲೆ ಎಂದರೇನು? ಮಾನಸಿಕ ಕಾಯಿಲೆ ಲಕ್ಷಣಗಳು? ಯಾವವು ಎಂಬುವುದರ ಕುರಿತು ಮಾಹಿತಿಯನ್ನು ನೀಡಿದರು, ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆಯಾಗಿದ್ದು ಇದನ್ನು ಚಿಕಿತ್ಸೆಯ ಮೂಲಕ ಗುಣಪಡಿಸಬಹುದು. ಯಾರಾದರೂ ನಿಮ್ಮ ಕೆಲಸದ ಸ್ಥಳಗಳಲ್ಲಿ ಹಾಗೂ ನಿಮ್ಮ ಮನೆಗಳಲ್ಲಿ ಕಂಡು ಬಂದರೆ ನೀವು ನಮಗೆ ತಿಳಿಸಬೇಕು, ಇಂಥವರಿಗಾಗಿ ಸರಕಾರದಿಂದ ಉಚಿತ ತಪಾಸಣೆ ಮತ್ತು ಉಚಿತ ಚಿಕಿತ್ಸೆಯನ್ನು ನೀಡಲಾಗುವುದು ಎಂದು ತಿಳಿಸಲಾಯಿತು. ಹೆಚ್ಚಿನ ಮಾಹಿತಿಗಾಗಿ 9036664271 ಕರೆಮಾಡಿ ಸೂಕ್ತ ಮಾರ್ಗದರ್ಶನವನ್ನು ಪಡೆದುಕೊಳ್ಳಬಹುದು ಎಂದು ತಿಳಿಸಲಾಯಿತು. ಈ ಒಂದು ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮದಲ್ಲಿ 10 ಜನರು ಭಾಗವಹಿಸಿದರು.

## "ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ"




ಕಮಲನಗರ ತಾಲೂಕಿನ ಲಕ್ಷ್ಮೀನಗರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಮತ್ತು ಎಲ್.ಎಲ್.ಎಲ್.ಎಫ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಮಾನಸಿಕ ಅಸ್ವಸ್ಥತೆ ಎಂದರೆ ಮಾನವನ ಮನಸ್ಸು, ಭಾವನೆಗಳು, ಆಲೋಚನೆಗಳು ಮತ್ತು ವರ್ತನೆಗಳಲ್ಲಿ ಸಂಭವಿಸುವ ಅಸಾಮಾನ್ಯತೆ ಎಂದು ಎಲ್ಲರಿಗೂ ತಿಳಿಸಲಾಯಿತು. ಇದು ವ್ಯಕ್ತಿಯ ದಿನನಿತ್ಯದ ಜೀವನದ ಮೇಲೆ ಪರಿಣಾಮ ಬೀರುವಷ್ಟು ಗಂಭೀರವಾಗಿರಬಹುದು ಅದಕ್ಕಾಗಿ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಲಾಯಿತು. ಮಾನಸಿಕ ಅಸ್ವಸ್ಥತೆಯು ಅನೇಕ ಕಾರಣಗಳಿಂದ ಉಂಟಾಗಬಹುದು ಎನ್ನುತ್ತಾ ಕೆಲವು ಪ್ರಮುಖ ಕಾರಣಗಳ ಮಾಹಿತಿ ನೀಡಲಾಯಿತು. ಮೆದುಳಿನ ರಾಸಾಯನಿಕ ಸಮತೋಲನದಲ್ಲಿ ವ್ಯತ್ಯಾಸ, ಜನ್ಮದಿಂದಲೂ ಇರುವ ನರ ಸಂಬಂಧಿ ತೊಂದರೆಗಳು, ಹಾರ್ಮೋನ್‌ಗಳ ಅಸಮತೋಲನ, ಬಾಲ್ಯದ ಅಥವಾ ಜೀವನದ ಅತ್ಯಂತ ನೋವಿನ ಅನುಭವಗಳು ಮತ್ತು ಆತ್ಮವಿಶ್ವಾಸದ ಕೊರತೆಯ ಕುರಿತು ವಿವರವಾದ ಮಾಹಿತಿ ನೀಡಲಾಯಿತು. ಮಾನಸಿಕ ಅಸ್ವಸ್ಥತೆ ಪ್ರಕಾರಗಳಿಗೆ ಅನುಗುಣವಾಗಿ ಲಕ್ಷಣಗಳು ಬದಲಾಗುತ್ತವೆ ಎಂಬ ಮಾಹಿತಿ ಯೊಂದಿಗೆ ಈ ಜಾಗೃತಿ ಕಾರ್ಯಕ್ರಮವನ್ನು ಮುಕ್ತಾಯ ಗೊಳಿಸಲಾಯಿತು.

## "ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ"




09 ಅಕ್ಟೋಬರ್ 2025 ರಂದು ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲೀವ್.ಲವ್.ಲಾಫ್ ಫೌಂಡೇಶನ್ ಅವರ ಸಹಯೋಗದಲ್ಲಿ ಶಮಷರಪೂರವಾಡಿ ಗ್ರಾಮದಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. ಈ ಕಾರ್ಯಕ್ರಮವನ್ನು ಸಂಸ್ಥೆಯ ಕಾರ್ಯಕರ್ತ ಶ್ರೀ ಪೀಟರ್ ಅವರು ಉದ್ಘಾಟಿಸಿ. ಕೆಲವೊಂದು ಅಂಶಗಳನ್ನು ತಿಳಿಯಪಡಿಸಿದರು. "ಆರೋಗ್ಯವೆಂದರೆ ಕೇವಲ ದೇಹದ ಸುಸ್ಥಿತಿ ಮಾತ್ರವಲ್ಲ, ಮನಸ್ಸು ಮತ್ತು ಸಂಬಂಧಗಳ ಸಮತೋಲನ ಕೂಡ ಅಗತ್ಯ" ಖಿನ್ನತೆ, ಆತಂಕ ಮತ್ತು ಭಯದ ಕುರಿತು ಮಾಹಿತಿ, ಮಾನಸಿಕ ಸಮಸ್ಯೆಗಳನ್ನು ಪ್ರಾರಂಭದಲ್ಲೇ ಗುರುತಿಸುವ ಮಹತ್ವ ಸಮಯಕ್ಕೆ ತಜ್ಞರಿಂದ ಚಿಕಿತ್ಸೆ ಪಡೆಯುವ ಅಗತ್ಯ ಭಾಲ್ಕಿ ತಾಲೂಕು ಆಸ್ಪತ್ರೆಯಲ್ಲಿ ನಡೆಯುವ ಉಚಿತ ತಪಾಸಣಾ ಶಿಬಿರಗಳ ವಿವರಣೆ ನೀಡಿದರು. ಈ ಕಾರ್ಯಕ್ರಮವು ಗ್ರಾಮಸ್ಥರಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಹೊಸ ಚೈತನ್ಯತನವನ್ನು ಮೂಡಿಸಿತು. ಒಟ್ಟು 7 ಜನರು ಭಾಗವಹಿಸಿ ತಮ್ಮ ವೈಯಕ್ತಿಕ ಅನುಭವಗಳನ್ನು ಹಂಚಿಕೊಂಡರು.

## "ಬಾಬು ನರ್ಸಿಂಗ್ ಇವರಿಗೆ ಆರ್ಬಿಟ್ ಸಂಸ್ಥೆಯಿಂದ ಗಾಲಿ ಕುರ್ಚಿ"



ಬಾಬು ನರ್ಸಿಂಗ್ ಕಾಂಬಳೆ, ಬಸವಕಲ್ಯಾಣ ತಾಲ್ಲೂಕಿನ, ಗೌರ ತಾಂಡಾ ಗ್ರಾಮದ ನಿವಾಸಿ. ಇವರು ಸುಮಾರು ನಾಲ್ಕು ವರ್ಷದಿಂದ ಪಾರ್ಶ್ವ ವಾಯುರೋಗದಿಂದ ಬಳಲುತ್ತಿದ್ದರು. ಇವರಿಗೆ ನಡೆಯಲು ಮತ್ತು ಅತ್ತಿತ್ತ ಹೋಗಲು ತುಂಬಾ ಕಷ್ಟವಾಗುತ್ತಿತ್ತು. ಹಾಗಾಗಿ ಇವರಿಗೆ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಆಕಾಶ್ ರವರು ಮನೆಗೆ ಭೇಟಿ ನೀಡಿ ಅವರ ಪರಿಸ್ಥಿತಿಯನ್ನು ಕಂಡು ಇವರಿಗೆ ಆರ್ಬಿಟ್ ಸಂಸ್ಥೆಯಿಂದ ಕುರ್ಚಿಯನ್ನು ಒದಗಿಸಿದರು. ಇದರಿಂದ ಬಾಬು ರವರು ತುಂಬಾ ಸಂತೋಷಗೊಡು ಆರ್ಬಿಟ್ ಸಂಸ್ಥೆಗೆ ಧನ್ಯವಾದ ವ್ಯಕ್ತಪಡಿಸಿದ್ದಾರೆ.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಚೇತನ ಕೇಂದ್ರದಲ್ಲಿ ಪಾಲಕರ ಸಭೆ"



ಅಕ್ಟೋಬರ್ 10 ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜೀ ಯವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಅಡಿಯಲ್ಲಿ ಸಾವಳಗಿ ಗ್ರಾಮದ ಚೇತನ ಕೇಂದ್ರದಲ್ಲಿ ಪಾಲಕರ ಸಭೆಯನ್ನು ಮಾಡಲಾಯಿತು. ಈ ಸಭೆಯಲ್ಲಿ ಬೆಳೆವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳಿಗೆ ಸರ್ಕಾರದಿಂದ ಇರುವ ಸೌಲಭ್ಯಗಳು ಯಾವವು, ಅವುಗಳನ್ನು ಯಾವರೀತಿ ಪಾಲಕರು ಉಪಯೋಗ ಪಡೆದುಕೊಳ್ಳಬೇಕು ವಿಶೇಷವಾಗಿ ಯುಡಿಐಡಿ ಕಾರ್ಡ್, ನಿರಾಮಯ ಕಾರ್ಡ್, ಮತ್ತು ಪಂಚಾಯಿತಿನಲ್ಲಿರುವ 5% ಅನುದಾನ ಹೇಗೆ ಬಳಕೆ ಮಾಡುವುದನ್ನು ಕುರಿತು ಲಕ್ಷ್ಮಿಅವರು ಸಂಕ್ಷಿಪ್ತವಾದ ಮಾಹಿತಿಯನ್ನು ಆರು ಜನ ಪಾಲಕರಿಗೆ ನೀಡಿದರು.

## "ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಕಾರ್ಯಕ್ರಮ"



28 ಅಕ್ಟೋಬರ್ 2025ರಂದು ಸೇವಾಸಂಘ ಸಂಸ್ಥೆ ಮತ್ತು ಅಜೀಮ್ ಪ್ರೇಮಜೀ ಫೌಂಡೇಶನ ಸಂಯೋಗದಲ್ಲಿ ಕಲ್ಬುರ್ಗಿ ನಗರದ ಶಹಬಜಾರ್ನಾಕ ಏರಿಯಾದ ಸರ್ದಾರ ವಲ್ಲಭಾಯಿ ಪಟೇಲ್ ಪ್ರೌಢ ಶಾಲೆಯಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು ಈ ಸಭೆಯಲ್ಲಿ ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳನ್ನು ಹುಟ್ಟಿನಿಂದ ಆರು ವರ್ಷದ ಒಳಗ ಇರುವ ಮಕ್ಕಳನ್ನು ಹೇಗೆ ಗುರುತಿಸುವದು ಮತ್ತು ಅಂತಹ ಮಕ್ಕಳಿಗೆ ಚಟುವಟಿಕೆಗಳು ನೀಡಿ ಬದಲಾವಣೆ ಮಾಡುವುದನ್ನು ವಿಶ್ಲೇಷಣೆ ಪ್ರತಿಯಲ್ಲಿ ಇದ್ದ ಮಗುವನ್ನು ವಯಸ್ಸಿನ ಅನುಗುಣವಾಗಿ ಮಗು ಚಲನ ವಲನ ಮಾಡದ ಇದ್ದರೆ ಅಂತ ಮಕ್ಕಳನ್ನು ವಿಶೇಷ ಚೈತನ ಮಗು ಎಂದು ಗುರುತಿಸಲಾಗುವುದು ಮತ್ತು ಸರಕಾರದಿಂದ ಸಿಗುವ ಸೌಲಭ್ಯಗಳು ಸಾಧನ ಸಲಕರಣೆಗಳು ನೀಡುವುದರ ಕುರಿತಾಗಿ ಈ ಸಭೆಯಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು ಇದರಲ್ಲಿ ಒಟ್ಟು ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸೇರಿ 40 ಜನಭಾಗವಹಿಸಿದ್ದರು.

## "ಪೌಷ್ಟಿಕ ಆಹಾರದ ಕುರಿತು ಗರ್ಭಿಣಿ ಮಹಿಳೆಯರಿಗೆ ತರಬೇತಿ"



11 ಅಕ್ಟೋಬರ್ 2025ರಂದು ಕಲ್ಬುರ್ಗಿ ಜಿಲ್ಲೆಯಲ್ಲಿ ಬರುವ ಸರಡಗಿ ಗ್ರಾಮದಲ್ಲಿ ಅಂಗನವಾಡಿ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜೀ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಪೌಷ್ಟಿಕ ಆಹಾರದ ಕುರಿತು ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕ ಆಹಾರ ಯಾವ ರೀತಿಯಾಗಿ ಸೇವನೆ ಮಾಡಬೇಕುಎಂಬುದರ ಕುರಿತು ಈ ರೀತಿಯಾಗಿ ಹೇಳಲಾಯಿತು, ಗರ್ಭಿಣಿಯರು ಉತ್ತಮವಾದ ಆಹಾರವನ್ನು ಸೇವನೆ ಮಾಡಬೇಕು ಏಕೆಂದರೆ ಮಗುವಿನ ಆರೋಗ್ಯಸ್ಥಿತಿಯು ಉತ್ತಮವಾಗಿ ಇರುತ್ತದೆ ಗರ್ಭಿಣಿ ಮಹಿಳೆಯರು ಹಸಿ ತರಕಾರಿಗಳು, ಪೌಷ್ಟಿಕಅಂಶವುಳ್ಳ ಕಾಳುಗಳನ್ನು ಸೇವನೆ ಮಾಡಬೇಕು ಮತ್ತು ಹಾಲು ಮತ್ತು ಮೊಟ್ಟೆಯನ್ನು ಸೇವನೆ ಮಾಡಬೇಕು, ಮೂರು ತಿಂಗಳಿಂದ ಮತ್ತು 9 ತಿಂಗಳ ವರೆಗೆ ಗರ್ಭಿಣಿ ಮಹಿಳೆಯರು ಎಚ್ಚರ ವಹಿಸಬೇಕು ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ದಾಕ್ಷಾಯಣಿ ಅವರು ಮಾಹಿತಿ ತಿಳಿಸಿದರು. ಈ ಒಂದು ಕಾರ್ಯಕ್ರಮದಲ್ಲಿ 12 ಜನ ಭಾಗವಿಸಿದರು.

## "ಪಾಲನ ಪೋಷಕರ ಸಭೆ"



ಕಲಬುರ್ಗಿ ನಗರ ಪ್ರದೇಶದಲ್ಲಿ ಬರುವಂತಹ ಅಂಬಿಕಾ ನಗರ ಅಂಗನವಾಡಿ ಕೇಂದ್ರ 2ರಲ್ಲಿ 9/10/2025 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ ಪಾಲನ ಪೋಷಕರ ಸಭೆ ಹಮ್ಮಿಕೊಳ್ಳಲಾಯಿತು. ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕಾರ್ಯಕರ್ತೆಯಾದ ಅನಿತಾ ಅವರು ಈ ಸಭೆಯಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳಿಗೆ ಇರುವ ಸರ್ಕಾರಿ ಸೌಲಭ್ಯಗಳನ್ನು ಯಾವರೀತಿ ಪಡೆದುಕೊಳಬೇಕು ಹಾಗೂ ನಿರಾಮಯ ಕಾರ್ಡ್ ಬಗ್ಗೆ ಕುರಿತು ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಅನ್ನಪೂರ್ಣ, ಕು. ಅನಿತಾ ಹಾಗೂ 9 ಜನ ಪಾಲಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## "ಅಂಗನವಾಡಿ ಕೇಂದ್ರದಲ್ಲಿ ಪಾಲಕರ ಸಭೆ"



21 ಅಕ್ಟೋಬರ್ 2025ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮ ಜಿ ಯವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಅಡಿಯಲ್ಲಿ ಕಲ್ಬುರ್ಗಿ ನಗರ ಪ್ರದೇಶದಲ್ಲಿರುವ ಸಾಬೀಯ ಮಜಿದ ಅಂಗನವಾಡಿ ಕೇಂದ್ರದಲ್ಲಿ ಪಾಲಕರ ಸಭೆಯನ್ನು ಮಾಡಲಾಯಿತು. ಈ ಸಭೆಯಲ್ಲಿ ವಿಕಲ ಚೇತನ ಮಕ್ಕಳಿಗೆ ಸರಕಾರದಿಂದ ಸಿಗುವ ಸೌಲಭ್ಯಗಳು ಕುರಿತು ಮತ್ತು ಮಕ್ಕಳ ಶಿಕ್ಷಣದ ಕುರಿತು 2016ರ ವಿಕಲ ಚೇತನ ಮಕ್ಕಳಿಗೆ ಶಿಕ್ಷಣದ ಸೌಲಭ್ಯಗಳ ಕುರಿತು ಅವುಗಳನ್ನು ನಾವು ಯಾವರೀತಿ ಪಾಲಕರ ಒಗ್ಗಟ್ಟಿನ ಮೂಲಕ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು. ಎನ್ನುವುದರ ಕುರಿತು ಚರ್ಚೆ ಮಾಡಲಾಯಿತು. ಈ ಸಭೆಯಲ್ಲಿ ಶ್ರೀಮತಿ ಶಿವಕಾಂತ ಮಾಹಿತಿ ತಿಳಿಸಿದರು 8 ಜನ ಪಾಲಕರು ಭಾಗವಹಿಸಿದರು.

## "ಚೇತನ ಕೇಂದ್ರದಲ್ಲಿ ಆರೈಕೆದಾರರ ದಿನಾಚರಣೆ ಕಾರ್ಯಕ್ರಮ"



29 ಅಕ್ಟೋಬರ್ 2025ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜೀ ಫೌಂಡೇಶನ ಇವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ "ಆರೈಕೆದಾರರ" ದಿನಾಚರಣೆಯ ಕಾರ್ಯಕ್ರಮವನ್ನು ಕಲ್ಬುರ್ಗಿ ನಗರ ಪ್ರದೇಶದ ಚೇತನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಉದ್ದೇಶಿಸಿ ಸೆಂಟೆ ಮೇರಿ ಚರ್ಚ್ ಗುರುಗಳಾದ ಫಾದರ್ ಆಯಿರಾನ ಅವರು ವಿಶೇಷ ಚೇತನ ಮಕ್ಕಳಿಗೆ ವಿಶೇಷವಾದ ಹಾರೈಕೆ ಮಾಡಬೇಕು. ಅವರಿಗೆ ಉತ್ತಮವಾದ ಪರಿಸರ ಒದಗಿಸಬೇಕು, ಅತಿಯಾದ ಪ್ರೀತಿ ಕಾಳಜಿ ವಹಿಸಿ ಸಾಮಾನ್ಯ ಮಕ್ಕಳಂತೆ ಈ ಮಕ್ಕಳಿಗೂ ಶಿಕ್ಷಣವನ್ನು ಕೊಡಿಸಬೇಕೆಂದು ತಿಳಿಸಿದರು. ಆರ್ಪಿಡಿಟಾ ಫೌಂಡೇಶನ ಕಲ್ಬುರ್ಗಿ ನಗರದ ಜಿಲ್ಲಾ ಅಧ್ಯಕ್ಷರಾದ ಶ್ರೀಮತಿ ಗಾಯಿತ್ರಿರವರು ಮಾತನಾಡಿ ತಮ್ಮ ಅನುಭವದ ಮೂಲಕ ಆರೈಕೆದಾರರ ಪಾತ್ರ ಸಮಾಜದಲ್ಲಿ ಮಹತ್ವಪೂರ್ಣವಾದದ್ದು, ಇಂಥ ವಿಶೇಷ ಚೇತನ ಮಕ್ಕಳ ಪಾಲನೆ ಮಾಡುವುದು ಕಷ್ಟಕರವಾದದ್ದು ಆದರೂ ಅವರಿಂದ ನಮಗೆ ಸಮಾಜದಲ್ಲಿ ಗೌರವ ಸಿಗುತ್ತಿದೆ. ಮತ್ತು ಸರ್ಕಾರದಿಂದ ಹಲವಾರು ಸೌಲಭ್ಯಗಳು ಇದ್ದು ನಾವೆಲ್ಲರು ಒಗ್ಗಟ್ಟಾಗಿ ಅದನ್ನು ಪಡೆದುಕೊಳ್ಳಬೇಕು ಎಂದು ಮಾಹಿತಿ ನೀಡಿದರು. ಸೇವಾ ಸಂಗಮ ಸಂಸ್ಥೆಯ ಸಂಯೋಜಕರಾದ ಶ್ರೀಮತಿ ಶ್ವೇತಾ ಕುಲಕರ್ಣಿ ಪೋಷಕರನ್ನು ಉದ್ದೇಶಿಸಿ ಆರೈಕೆದಾರರ ಭತ್ಯ ಎರಡು ವರ್ಷದ ಹಿಂದೆ ಪ್ರಾರಂಭವಾಗಿದ್ದು, ಪೋಷಣಾ ಭತ್ಯ ಅರ್ಜಿ ಹಾಕಲು ಬೇಕಾಗುವ ದಾಖಲೆಗಳು ಮತ್ತು ಯಾವ ಕಚೇರಿಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು ಎಂಬುದರ ಕುರಿತು ಪೋಷಕರಿಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಸುಮಾರು 30 ಜನ ಪೋಷಕರು ಭಾಗವಹಿಸಿದ್ದರು. ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ಶಿವಕಾಂತ ಅವರು ನಿರೂಪಣೆಮಾಡಿದರು. ಕುಮಾರಿ ಅನಿತಾ ಅವರು ಸ್ವಾಗತಿಸಿದರು. ಶ್ರೀಮತಿ ವಿಜಯಲಕ್ಷ್ಮಿ ಅವರು ವಂದಿಸಿದರು.

## "ಸಖಿ ಯೋಜನೆಯ ಕುರಿತು ಕಾರ್ಯಕ್ರಮ"



14 ಅಕ್ಟೋಬರ್ 2025ರಂದು ಕಲಬುರಗಿ ತಾಲ್ಲೂಕಿನಲ್ಲಿ ಬರುವ ಭೀಮಳ್ಳಿ ಗ್ರಾಮದ ಶ್ರೀ ಮಹಾಲಕ್ಷ್ಮಿ ದೇವಸ್ಥಾನದ ಆವರಣದಲ್ಲಿ ಸೇವಾ ಸಂಗಮ ಸಂಸ್ಥೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಸಖಿ ಯೋಜನೆಯ ಕುರಿತು ಸಖಿ ಯೋಜನೆಯ ಕಾನೂನು ಸಲಹೆಗಾರರಾದ ಶ್ರೀಮತಿ ಪ್ರೇಮ ಇವರು ಮಾಹಿತಿಯನ್ನು ನೀಡಿದರು. ಸಖಿ ಯೋಜನೆ ದೌರ್ಜನ್ಯಕ್ಕೆ ಒಳಗಾದವರಿಗೆ ಆಪ್ತಸಮಾಲೋಚನೆ, ಕಾನೂನು ಸಲಹೆಗಳು, ರಕ್ಷಣೆ, ಆಶ್ರಯ, ಹೀಗೆ ಒಂದೇ ಸೂರಿನಡಿಯಲ್ಲಿ ಹಲವಾರು ಸೇವೆಯನ್ನು ಒದಗಿಸುವ ಒಂದು ಕಾರ್ಯಕ್ರಮವಾಗಿದೆ ಎಂದು ಹೇಳಿದರು. ಈ ಸಂಧರ್ಭದಲ್ಲಿ ಗ್ರಾಮಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಭಾರತಿ ಇವರು ಮಾತನಾಡಿ ಗ್ರಾಮೀಣ ಭಾಗದ ಮಹಿಳೆಯರು ಹಲವಾರು ಸಮಸ್ಯೆಗಳಿಂದ ಬಳಲುತ್ತಿರುತ್ತಾರೆ ಯಾರ ಹತ್ತಿರ ಹೇಳಿದರೆ ನಮಗೆ ಸಹಾಯಸಿಗುತ್ತದೆ ಎಂಬುವುದು ದಾರಿಕಾಣದೆ ಕುಳಿತಿರುವ ನಿಮಗೆ ಇದು ಸಖಿ ಯೋಜನೆ ಕಾರ್ಯಕ್ರಮ ಒಂದು ಉತ್ತಮ ಅವಕಾಶವಾಗಿದೆ. ಈ ಕಾರ್ಯಕ್ರಮದ ಸದುಪಯೋಗವನ್ನು ಗ್ರಾಮದ ಎಲ್ಲ ಮಹಿಳೆಯರು ಪಡೆದುಕೊಳಿ ಎಂದು ಹೇಳಿದರು.

## "ಕೂಸಿನ ಮನೆಯಲ್ಲಿ ಬೇಬಿ ಸ್ಕ್ರೀನಿಂಗ್"



6 ಅಕ್ಟೋಬರ್ 2025ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜೀ ಫೌಂಡೇಶನ ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಭೀಮಳ್ಳಿ ಗ್ರಾಮದ ಕೂಸಿನ ಮನೆಯಲ್ಲಿ ಬೇಬಿ ಸ್ಕ್ರಿನಿಂಗ ಹಮ್ಮಿಕೊಳ್ಳಲಾಯಿತು. ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಗುವಿಗೆ ಎತ್ತರ ತೂಕ ಚೆಕ್ಮಾಡುವುದರ ಮೂಲಕ ಮಕ್ಕಳು ಕೊಂಟಿತ ಹೊಂದಿದೆ ಎಂಬುದನ್ನು ಕಂಡು ಹಿಡಿಯುವುದು ಲಕ್ಷ್ಮಿಯವರು ತಿಳಿಸಿದರು ಇದರಲ್ಲಿ ಒಟ್ಟು 20 ಜನ ಮಕ್ಕಳು ಭಾಗವಹಿಸಿದ್ದರು.

## "ಆರೋಗ್ಯಯುತ ಪೃಥ್ವಿ ಆರೋಗ್ಯಕರ ಜೀವನ"



ದಿನಾಂಕ 15 ಅಕ್ಟೋಬರ್ 2025 ರಂದು ಕಲಬುರಗಿ ತಾಲೂಕಿನಲ್ಲಿ ಬರುವ ಭೀಮಳ್ಳಿ ಗ್ರಾಮದಲ್ಲಿ ಶ್ರೀ ಮಾಹಾಲಕ್ಷ್ಮೀ ದೇವಸ್ಥಾನದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಾಗೂ ಕ್ಯಾನ್ಸರ ಸ್ಕ್ರೀನಿಂಗ್ ಶಿಬಿರವನ್ನು ಸೇವಾ ಸಂಗಮ ಸಂಸ್ಥೆ, ಇಂಡಿಯನ ಕ್ಯಾನ್ಸರ ಸೂಸೈಟಿ ಹಾಗೂ ಗ್ರಾಮ ಪಂಚಾಯಿತ ಭೀಮಳ್ಳಿ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಭಾರತಿಯವರು ಮಾತನಾಡಿ "ಆರೋಗ್ಯವೇ ಭಾಗ್ಯ" ಉತ್ತಮ ಆರೋಗ್ಯವನ್ನು ಹೋಂದಿರುವ ವ್ಯಕ್ತಿ ಪ್ರಪಂಚದ ಅತ್ಯಂತ ಶ್ರೀಮತ್ತ ವ್ಯಕ್ತಿಯಾಗಿದ್ದಾನೆ. ಮಾತು ಬಲ್ಲವನಿಗೆ ಜಗಳವಿಲ್ಲ ಊಟ ಬಲ್ಲವನಿಗೆ ರೋಗವಿಲ್ಲ ಎಂಬ ಗಾಧೆ ಮಾತಿನಂತೆ ನಾವು ಸೇವಿಸುವ ಆಹಾರ ಉತ್ತಮ ಆರೋಗ್ಯವನ್ನು ಸೃಷ್ಟಿಸುವ ಪೌಷ್ಠಿಕ ಆಹಾರವಾಗಿರಬೇಕು, ಪ್ರತಿದಿನ ನಾವು ಸ್ವಲ್ಪ ಮಟ್ಟದಲ್ಲದಾರು ಹಣ್ಣುಗಳನ್ನು ಸೇವಿಸಬೇಕು, ಆರೋಗ್ಯದಲ್ಲಿ ಚಿಕ್ಕಮಟ್ಟ ಏರು ಪೇರುಗಳಾದಾಗ ಕೂಡಲೇ ಹತ್ತಿರದ ವೈದ್ಯರನ್ನು ಕಾಣಬೇಕು ಹಾಗೂ ಅವರ ಗಮನಕ್ಕೆ ತರಬೇಕು, ನಿರ್ಲಕ್ಷಿದಲ್ಲಿ ಅದು ನಾಳೆ ನಿಮ್ಮ ಜೀವಕ್ಕೆ ಅಪಾಯವನ್ನು ತಂದೊಡಬಹುದು, ಆದ್ದರಿಂದ ಗ್ರಾಮದ ಜನರು ಉಚಿತ ಆರೋಗ್ಯ ಶಿಬಿರದ ಸದುಉಪಯೋಗವನ್ನು ಪಡೆದುಕೊಳ್ಳಿ ಮತ್ತು ಹಿಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದು ಹೇಳಿದರು.




ಕಾರ್ಯಕ್ರಮದಲ್ಲಿ ಪ್ರಾಸ್ತವಿಕವಾಗಿ ಮಾತನಾಡಿದ ಶ್ರೀಮತಿ ಶ್ವೇತಾ ಕುಲಕರ್ಣಿ ಸೇವಾ ಸಂಗಮ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ವ್ಯವಸ್ಥಾಪಕರಾದ ಇವರು ಸೇವಾ ಸಂಗಮ ಸಂಸ್ಥೆಯು ಕಲಬುರ್ಗಿ ಜಿಲ್ಲೆಯಲ್ಲಿ 18 ವರ್ಷಗಳಿಂದ ಸಮಾಜದಲ್ಲಿರುವ ದುರ್ಬಲರ ಹಾಗೂ ಸಮಾಜದ ಕಟ್ಟಾಕಡೆಯ ವ್ಯಕ್ತಿಯ ಏಳಿಗೆಗಾಗಿ ಅವರ ಅಭಿವೃದ್ದಿಗಾಗಿ, ಅನೇಕ ಅಭಿವೃದ್ಧಿಗಳ ಕಾರ್ಯಕ್ರಮಗಳ ಮೂಲಕ ಸರ್ಕಾರದ ಕಾರ್ಯಕ್ರಮಗಳ ಕಾರ್ಯಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಜಾರಿಗೋಳಿಸುವಲ್ಲಿ ಹಾಗೂ ವಿಷಯ ಕುರಿತು ಮಾಹಿತಿಯನ್ನು ನೀಡುವ ನೀಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿರುತ್ತದೆ. ಗ್ರಾಮೀಣ ಭಾಗದ ಜನರ ಆರೋಗ್ಯದ ಕುರಿತು ಜಾಗ್ರತರಾಗಲು ಹಾಗೂ ಅವರಿಗೆ ಉಚಿತವಾಗಿ ಅವರ ಆರೋಗ್ಯವನ್ನು ತಪಾಷಣೆ ಮತ್ತು ಕ್ಯಾನ್ಸರ್ ಸ್ಕೀನಿಂಗ ಮಾಡಿಸಲು ಅನುಕೂಲವಾಗುವಂತ್ತೆ ಮಾಡಲು ಪ್ರತಿ ಗ್ರಾಮ ಪಂಚಾಯಿತ ಮಟದಲ್ಲಿ ಪಂಚಾಯತಿಯ ಸಹಾಕಾರದೊಂದಿಗೆ ಇಂತಹ ಉಚಿತ ಆರೋಗ್ಯ ತಪಾಷಣೆ ಶಿಬಿರಗಳನ್ನು ಆಯೋಜಿಸಲಾಗಿದೆ. ಎಲ್ಲಾ ಗ್ರಾಮಸ್ಥರು ಈ ಶಿಬಿರದ ಲಾಭವನ್ನು ಪಡೆದುಕೋಳ್ಳಿ ಎಂದು ಹೇಳಿದರು. ಈ ಕಾರ್ಯಕ್ರಮದ ವೇದಿಕೆಯಲ್ಲಿ ಶ್ರೀಮತಿ ಸಿದ್ದಮ್ಮ ಅಧ್ಯಕ್ಷರು ಗ್ರಾಮ ಪಂಚಾಯತ ಭೀಮಳ್ಳಿ, ಶ್ರೀಮತಿ ನಾಗರತ್ನ ಸಿ.ಎಚ್.ಓ, ಶ್ರೀಮತಿ ಆಶಾ ಜಾಧವ ಪಿ.ಎಚ್.ಸಿ.ಓ ಸಾವಳಗಿ ಹಾಗೂ ಶ್ರೀಮತಿ ಸುಸ್ಮೀತಾ ವೈದ್ಯಾಧಿಕಾರಿಗಳು ಹಾಗೂ ಇಂಡಿಯನ್ ಕ್ಯಾನ್ಸರ್ ಸೂಸೈಟಿಯ ಯೋಜನಾ ಸಂಯೋಜಕರು ಉಪಸ್ಥಿತರಿದ್ದರು, ಕಾರ್ಯಕ್ರಮವನ್ನು ರಾಜಕುಮಾರ ರವರು ನಿರೋಪಿಸಿದ್ದರು, ಶ್ರೀಮತಿ ನಂದಿನಿ ಸ್ವಾಗತಿಸಿದರು. ಲಕ್ಷ್ಮೀ ಅವರು ವಂದಿಸಿದ್ದರು. ಕಾರ್ಯಕ್ರಮದಲ್ಲಿ 100 ಕಿಂತ ಅಧಿಕ ಜನರು ಭಾಗವಹಿಸಿ ತಮ್ಮ ಆರೋಗ್ಯ ತಪಾಷಣೆ ಮಾಡಿಸಿಕೊಂಡ್ಡರು.



## "ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಕುರಿತು ಜಾಗೃತಿ"





14 ಅಕ್ಟೋಬರ್ 2025 ರಂದು ಕಲಬುರಗಿ ತಾಲ್ಲೂಕಿನಲ್ಲಿ ಬರುವ ಭೀಮಳ್ಳಿ ಗ್ರಾಮದ ಶ್ರೀಮಹಾಲಕ್ಷ್ಮೀ ದೇವಸ್ಥಾನದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಕುರಿತು ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕಶಿಕ್ಷಣ ಯೋಜನೆಯ ಕಾರ್ಯಕರ್ತರಾದ ಶ್ರೀ ರಾಜಕುಮಾರ್ ರವರು ಮಾಹಿತಿಯನ್ನು ನೀಡಿದರು. 0 ಯಿಂದ 6 ವರ್ಷದ ಒಳಗಿನ ಮಕ್ಕಳಲ್ಲಿ ಬೆಳವಣಿಗೆಯ ಹಂತಗಳು ಕುಂಠಿತಗೊಳ್ಳುವುದು ಇದರ ಪರಿಣಾಮ ಮಕ್ಕಳು ತಮ್ಮ ವಯಸ್ಸಿಗೆ ಅನುಗುಣವಾಗಿ ತಮ್ಮ ಬೌದ್ಧಿಕ, ಸಾಮಾಜಿಕ, ಕಲಿಕಾ, ದೈಹಿಕ ಹಾಗೂ ಭಾಷಾ ಬೆಳವಣಿಗೆಯಲ್ಲಿ ಕುಂಠಿತರಾಗುತ್ತಾರೆ. ಇಂತಹ ಮಕ್ಕಳಿಗೆ ಶೀಘ್ರವಾಗಿ ಪತ್ತೆಮಾಡುವ ಮೂಲಕ ಮಕ್ಕಳ ನ್ಯೂನತೆಗೆ ತಕ್ಕಂತೆ ಉತ್ತೇಜಕ ಚಟುವಟಿಕೆಗಳನ್ನು ನೀಡುವ ಕಾರ್ಯ ಸೇವಾ ಸಂಗಮ ಸಂಸ್ಥೆಯು ಮಾಡುತ್ತಿದೆ. ಸರಿಯಾದ ಸಮಯಕ್ಕೆ ಉತ್ತೇಜಕ ಚಟುವಟಿಕೆ ದೊರೆಯದ ಸಂಧರ್ಭದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳು ವಿಕಲ ಚೇತನರಾಗುವ ಸಂಭವ ವಿರುತ್ತದೆ ಎಂದು ಹೇಳಿದರು.

## "ಪಾಲಕರ ಸಭೆ ಕೇಂದ್ರ ಆಧಾರಿತ ಚಟುವಟಿಕೆಯ ಮಹತ್ವ"



ದಿನಾಂಕ 13 ಅಕ್ಟೋಬರ್ 2025ರಂದು ಕಲ್ಬುರ್ಗಿ ನಗರದ ಚೈತನಾ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜೀ ಫೌಂಡೇಶನ್ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಪಾಲಕರ ಸಭೆ ಹಮ್ಮಿಕೊಳ್ಳಲಾಯಿತು. ಈ ಸಭೆಯಲ್ಲಿ ಮೊದಲಿಗೆ ಪರಸ್ಪರ ಪರಿಚಯ ಮಾಡಿಕೊಂಡು. ಪಾಲಕರ ಸಭೆ ಮುಖ್ಯ ಉದ್ದೇಶ ಹಾಗೂ ಹುಟ್ಟಿನಿಂದ ಆರು ವರ್ಷದ ಒಳಗಿನ ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳನ್ನು ಕೇಂದ್ರ ಆಧಾರಿತ ಚಟುವಟಿಕೆ ಮಹತ್ವ, ಹೆಚ್ಚು ಕೇಂದ್ರ ಆಧಾರಿತ ಚಟುವಟಿಕೆ ಪಡೆದುಕೊಂಡ ಮಕ್ಕಳ ಬದಲಾವಣೆ, ಹಾಗೂ ಸರಕಾರಿ ಸೌಲಭ್ಯಗಳ ಕುರಿತು ಪಾಲಕರ ಸಭೆಯಲ್ಲಿ ಪ್ರಾಜೆಕ್ಟ ಸಂಯೋಜಕರಾದ ಶ್ರೀಮತಿ ಶ್ವೇತಾ ಕುಲಕರ್ಣಿ ಸಭೆಯಲ್ಲಿ ಪಾಲಕರನ್ನು ಉದ್ದೇಶಿಸಿ ಮಾತನಾಡಿದರು. ಇದರಲ್ಲಿ ಎಲ್ಲಾ ಕಾರ್ಯಕರ್ತರು ಮತ್ತು 9 ಜನ ಪಾಲಕರು ಭಾಗವಹಿಸಿದ್ದರು.




## "ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು"



ಸಂಜೀವಾಣಿ

Sanjevani / 2025-10-16, 6, Vijaypura

### ಆರ್ಬಿಟ್ ಸಂಸ್ಥೆಯಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ



ಉದಯಕಾಲ

### ಘನತೆಯಿಂದ ಬದುಕುವ ಹಕ್ಕು ಸಂವಿಧಾನದಿಂದಲೇ ದೊರೆತಿದೆ

ನ್ಯಾ.ಪ್ರಶಾಂತ ಬಾದವಾಡಗಿ ಹೇಳಿಕೆ | ಕಾನೂನು ಅರಿವು, ನೆರವು ಕಾರ್ಯಕ್ರಮ

# ನೆಮ್ಮದಿ ಜೀವನಕ್ಕೆ ಮಾನಸಿಕ ಆರೋಗ್ಯ ಅವಶ್ಯ

## ನ್ಯಾಯಾಧೀಶ ಪ್ರಶಾಂತ ಬಾದವಾಡಗಿ ಅಭಿಪ್ರಾಯ | ವಿಶ್ವಮಾನಸಿಕ ಆರೋಗ್ಯ ದಿನಾಚರಣೆ



ಹುಮನಾಬಾದ್: ಆರ್ಬಿಟ್ ಸಮಾಜ ಸೇವಾ ಸಂಸ್ಥೆಯಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಅಂಗವಾಗಿ ಸೋಮವಾರ ಏರ್ಪಡಿಸಿದ ಕಾನೂನು ಅರಿವು–ನೆರವು ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶ ಪ್ರಶಾಂತ ಬಾದವಾಡಗಿ ಉದ್ಘಾಟಿಸಿದರು.

ಸಂ.ಕ.ಸಮಾಚಾರ ಹುಮನಾಬಾದ್: ನೆಮ್ಮದಿ ಜೀವನಕ್ಕೆ ಮಾನಸಿಕ ಆರೋಗ್ಯ ಅತ್ಯಂತ ಅವಶ್ಯಕ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಪ್ರಶಾಂತ ಬಾದವಾಡಗಿ ಅವರು ಅಭಿಪ್ರಾಯಪಟ್ಟರು.

ನಗರದ ಆರ್ಬಿಟ್ ಸಂಸ್ಥೆಯಲ್ಲಿ ತಾಲ್ಲೂಕು ಪಂಚಾಯಿತಿ, ಆರೋಗ್ಯ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಸೋಮವಾರ ಹಮ್ಮಿಕೊಂಡ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿ, ಮಾನಸಿಕ ಅಸ್ವಸ್ಥರು ಸಹ ಅಗತ್ಯ ಬಿದ್ದರೇ ಉಚಿತ ಕಾನೂನು ಅರಿವು ಮತ್ತು ನೆರವಿನ ಪ್ರಯೋಜನ ಪಡೆಯಬೇಕು ತನ್ಮೂಲಕ ಆರ್ಥಿಕ ಸ್ವಾವಲಂಬನೆ ಸಾಧಿಸಬೇಕು ಎಂದು ಸಲಹೆ ನೀಡಿದರು.

ಪಿಎಸ್‌ಐ ಸುರೇಶಕುಮಾರ ಚೌಹಾಣ ಮಾತನಾಡಿ, ಆರ್ಬಿಟ್ ಸಂಸ್ಥೆಯವರ ಸಹಯೋಗದೊಂದಿಗೆ ಬೀದಿಯಲ್ಲಿ ಬದುಕುತ್ತಿದ್ದ ಅದೆಷ್ಟೋ ಜನ ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ಕೊಡಿಸಿ, ಇತರರಂತೆ ಮುಖ್ಯವಾಹಿನಿ ತರಲು ಪ್ರಾಮಾಣಿಕ ಪ್ರಯತ್ನಿಸಲಾಗಿದೆ. ಆ ಕಾರ್ಯಗಳು ಸಫಲ ಆಗುತ್ತಿರುವುದು ಕರ್ತವ್ಯದ ಸಾರ್ಥಕತೆಗೆ ಸಾಕ್ಷಿಯಾಗಿವೆ ಎಂದರು.

ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ವಿಜಯಕುಮಾರ ನಾತೆ ಮಾತನಾಡಿದರು.

ಆರ್ಬಿಟ್ ಸಂಸ್ಥೆ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಅಧ್ಯಕ್ಷತೆವಹಿಸಿ ಮಾತನಾಡಿ, ಆರ್ಬಿಟ್ ಸಂಸ್ಥೆ ನಿರ್ಗತಿಗರಿಗೆ, ಮಾನಸಿಕ ಅಸ್ವಸ್ಥರ ಉದ್ಧಾರಕ್ಕಾಗಿ ನಡೆಸುತ್ತಿರುವ ಈವರೆಗೆ ಕೊಡಮಾಡಿದ ವಿವಿಧ ಯೋಜನೆಗಳ ಕುರಿತು ವಿಸ್ತೃತ ವಿವರಿಸಿದರು. ಸಹಾಯಕ ಸರ್ಕಾರಿ ಅಭಿಯೋಜಕ ಶ್ರೀನಿವಾಸ ಪಾಟೀಲ ಸೇರಿದಂತೆ ವಕೀಲರ ಸಂಘದ ಇತರೆ ಪದಾಧಿಕಾರಿಗಳಿದ್ದರು. ಕಾರ್ಯಕ್ರಮದಲ್ಲಿ ಪ್ರವೀಣಕುಮಾರ ಪ್ರಸ್ತಾವಿಕ ಮಾತನಾಡಿದರು. ಈ ವೇಳೆ ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಸೇವಾರ್ಥಿಗಳು ಇದ್ದರು.

# ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ



ಚಿಟಗುಪ್ಪ: ಪಟ್ಟಣದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಪುರಸಭೆ ಅಧ್ಯಕ್ಷ ದಿಲೀಪ ಕುಮಾರ ಬಗ್ಗಲಕರ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಆಡಳಿತ ವೈದ್ಯಾಧಿಕಾರಿ ವಿಜಯ ಹಿರಸ್ಕರ ಮಾನಸಿಕ ಆರೋಗ್ಯದ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು. ಫಾದರ ಜಾರ್ಜ್ ಕಾರ್ಯಕ್ರಮ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು. ಸಿಸ್ಟರ ಪ್ರೀತಿ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಪುರಸಭೆ ಉಪಾಧ್ಯಕ್ಷ ನಸೀರಖಾನ ಪುರ ಸಭೆ ಸದಸ್ಯರಾದ ಬಾಬ ಆರ್. ಸಿ. ಸಿ ತಾಲೂಕ ಪಂಚಾಯತ ಅಧಿಕಾರಿ ಸಂತೋಷ ಡಾ ಪ್ರೀತಿ ವಾಲಿ ಡಾ ನಜೀಮಾ ಪಟೇಲ ಆರೋಗ್ಯ ಇಲಾಖೆ ಸಿಬ್ಬಂದಿಗಳಾದ ದೇವಿಂದ್ರ ಪ್ರಭು ಮುದನ್ನಾಳಕರ ನಂದು ಕುಮಾರ ಗೀತಾ ತುಳಜೆ ರೇಖಾ ಸುಮಾ ವಂದನಾ ಸವಿತಾ ಅಶ್ವಿನಿ ಸಿದ್ದಲಿಂಗ ರಾಹುಲ ಗುಂಡಪ್ಪ ಅಸ್ಮಾ ಶಾಂತಮ್ಮ ಹಲಿಮಾ ಸೇರಿದಂತೆ ಆರ್ಬಿಟ ಸಂಸ್ಥೆಯ ಸಿಬ್ಬಂಧಿ ವರ್ಗದವರು ಉಪಸ್ಥಿತರಿದ್ದರು.


ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

ಮಲ್ಲಮ್ಮ ನುಡಿ

ಸಂಪಾದಕರು: ರಮೇಶ ರಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

17 Oct 2025 - Page 3


# ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ಪಟ್ಟಣದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಗುರುವಾರ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಪುರಸಭೆ ಅಧ್ಯಕ್ಷ ದಿಲೀಪಕುಮಾರ್ ಬಗ್ಗಲಕರ್ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಆಡಳಿತ ವೈದ್ಯಾಧಿಕಾರಿ ವಿಜಯಹಿರಸ್ಕರ್ ಮಾನಸಿಕ ಆರೋಗ್ಯದ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು. ಫಾದರ್ ಜಾರ್ಜ್ ಕಾರ್ಯಕ್ರಮದ ದಿವ್ಯಸಾನಿಧ್ಯವಹಿಸಿ ಮಾತನಾಡಿದರು. ಸಿಸ್ಟರ್ ಪ್ರೀತಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಪುರಸಭೆ ಉಪಾಧ್ಯಕ್ಷ ನಸೀರ್ ಖಾನ, ಪುರಸಭೆ ಸದಸ್ಯ ಬಾಬಾ ಆರ್.ಸಿ.ಸಿ., ತಾಲೂಕ ಪಂಚಾಯತ್ ಅಧಿಕಾರಿ ಸಂತೋಷ, ಡಾ. ಪ್ರೀತಿ ವಾಲಿ, ಡಾ. ನಜೀಮಾ ಪಟೇಲ್, ಆರೋಗ್ಯ ಇಲಾಖೆ ಸಿಬ್ಬಂದಿಗಳಾದ ದೇವಿಂದ್ರ ನಾಗನಕೇರಾ, ಪ್ರಭು ಮುದನ್ನಾಳಕರ್, ನಂದುಕುಮಾರ್, ಗೀತಾ ತುಳಜೆ, ರೇಖಾ, ಸುಮಾ, ವಂದನಾ, ಸವಿತಾ, ಅಶ್ವಿನಿ, ಸಿದ್ದಲಿಂಗ, ರಾಹುಲ, ಗುಂಡಪ್ಪ, ಅಸ್ಮಾ, ಶಾಂತಮ್ಮ, ಹಲಿಮಾ ಸೇರಿದಂತೆ ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.


ವರ

ಕಾರಂಜಾ ಎಕ್ಸ್‌ಪ್ರೆಸ್




ಭಾಲ್ಕಿ: ತುರ್ತು ಪರಿಸ್ಥಿತಿಯಲ್ಲಿ ಮತ್ತು ವಿಪತ್ತು ಗಳಲ್ಲಿ ಮಾನಸಿಕ ಆರೋಗ್ಯ ಸೇವೆಗಳ ಲಭ್ಯತೆ ಎಂಬ ಧ್ಯೇಯ ವಾಕ್ಯ ದೊಂದಿಗೆ ವಿಶ್ವ ಮಾನಸಿಕ ದಿನಾಚರಣೆ ಯನ್ನು ORBIT ಸಂಸ್ಥೆ ವತಿಯಿಂದ ಭಾಲ್ಕಿ ಜಿಲ್ಲಾ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಯಿತು .ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯಕ್ರಮದ ವ್ಯವಸ್ಥಾಪಕರಾದ ಸಿಸ್ಟರ್ ಕ್ರಿಸ್ಟಿನ ರವರು, ಫಾ.ರನಾಲ್ಡ್ ,CMO ಆದ ಡಾಕ್ಟರ್ ಅಬ್ದುಲ್ ಖದೀರ್ ,ಮನೋ ವೈದ್ಯರಾದ ಡಾಕ್ಟರ್ ಅಮಲ್ ಶರೀಫ್ ,BHEO ಚಂದ್ರಶೇಖರ್ ,ರಫೀಕ್ ಬ್ರದರ್ ಅನ್ನಿ ರವರು ಹಾಜರಿದರು . ಸಿಸ್ಟರ್ ಕ್ರಿಸ್ಟಿನಾ ರವರು ಈ ವರ್ಷದ ಮಾನಸಿಕ ಆರೋಗ್ಯದ ದಿನಾಚರಣೆ ಕುರಿತು ಮಾತನಾಡಿದರು.

# ಆರ್ಬಿಟ ಸಂಸ್ಥೆಯಿಂದ,ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ

ವರದಿ: ವೀರಶೆಟ್ಟಿ ಮಲಶೆಟ್ಟಿ ಧ



ಬಸವಕಲ್ಯಾಣ: ಅಕ್ಟೋಬರ 28 ರಂದು ಬಸವಕಲ್ಯಾಣ ತಾಲೂಕಾ ಸಾರ್ವಜನಿಕ ಆಸ್ಪತ್ರೆಯಲ್ಲಿ ,ಆರ್ಬಿಟ ಸಂಸ್ಥೆಯ ನವಜೀವನ ಲಿವ ಲವ ಲಾಫ ಫೌಂಡೇಶನ,ಮತ್ತು ತಾಲೂಕ ಆರೋ ಗ್ಯ ಇಲಾಖೆ,ವಿಶೇಷ ಚೇತನರ ಸಬಲೀ ಕರಣ ಇಲಾಖೆ ಗಳ ಜಂಟಿ ಆಶ್ರಯದಲ್ಲಿ, ವಿಶ್ವ ಮಾನಸಿಕ ಆರೋಗ್ಯ ದಿನಾ ಚರಣೆ"ಆಚರ ಸಲಾಯಿತು.

ಆರ್ಬಿಟ್ ಸಂಸ್ಥೆಯ ಸಹನಿರ್ದೇಶಕ ರಾದ ಫಾದರ್ ಆಲ್ಬರ್ಟ ಮಾತನಾಡಿ, ಮಾನಸಿಕ ಆರೋಗ್ಯದ ಕುರಿತು ಸಮಾಜದಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ ಪ್ರತಿಯೊಬ್ಬರೂ ಮಾನಸಿಕವಾಗಿ ಬಲಿಷ್ಠರಾಗಲು ಸಹಾನು ಭೂತಿ ಪ್ರೋತ್ಸಾಹ ಮತ್ತು ಪರಸ್ಪರ ಬೆಂಬಲದ ಮನೋಭಾವವನ್ನು ಬೆಳೆಸಿಕೊಳ್ಳ ಲು ಕರೆ ನೀಡಿದರು.ಈ ಕಾರ್ಯಕ್ರಮದ ಪ್ರಮುಖ ಉಪನ್ಯಾಸಕ ರಾಗಿ ಮನೋವೈದ್ಯರಾದ ಡಾ//ರಿತೇಶ್ ಸೂತ್ರವೇ ಮಾತನಾಡಿ , ಮಾನಸಿಕ ಆರೋಗ್ಯದ ಮಹತ್ವ ಮತ್ತು ಅದನ್ನ ಕಾಪಾಡಿಕೊಳ್ಳು ವ.ಮಾರ್ಗಗಳು ಜೀವನದ ಒತ್ತಡಗಳು,ಆತಂಕ, ಸಾಮಾ ಜಿಕ ಒತ್ತಾಯಗಳು,ಹಾಗೂ ಅವುಗಳ ಪರಿಣಾಮಗಳನ್ನು ವಿವರಿಸಿ, ಧ್ಯಾನ ವ್ಯಾಯಾಮ ಮತ್ತು ಸಕರಾತ್ಮಕ ಚಿಂತನೆಯ,ಮಹತ್ವವನ್ನ ವಿವರಿಸಿದ್ದರು.

ಮುಖ್ಯ ಅತಿಥಿಗಳಾಗಿ ಡಾ//ಅಶೋಕ ಮೈಲಾರೆ ತಾಲೂಕ ಆರೋಗ್ಯ ಅಧಿಕಾರಿಗಳು ಮಾತನಾಡಿ,ಇಂದಿನ ಜನರ ಜೀವನ ಶೈಲಿಂದಾಗಿ ಅನೇಕರು ಮಾನಸಿಕ ನೆಮ್ಮದಿಯನ್ನು ಕಳೆದು ಕೊಳ್ಳುತ್ತಿ ದ್ದಾರೆ.ಪ್ರತಿಯೊಬ್ಬರು ಮಾನಸಿಕ ಆರೋಗ್ಯದ ಕಡೆ ಹೆಚ್ಚಿನ ಗಮನ ನೀಡಿ, ಮಾರ್ಗ ದರ್ಶನದಂತೆ ಸೂಕ್ತ ಚಿಕಿತ್ಸೆ ಪಡೆಯಬೇಕು ಎಂದು ತಿಳಿಸಿ,ಈ ನಿಟ್ಟಿನಲ್ಲಿ ಆರ್ಬಿಟ ಸಂಸ್ಥೆಯು ಈ ಭಾಗದಲ್ಲಿ ಸಮಾಜ ಸುಧಾರಣೆಯ ಕೆಲಸ ಮಾಡುತ್ತಿದೆ ಎಂದು ಪ್ರಶಂಸಿಸಿದರು.ಈ ಕಾರ್ಯಕ್ರಮದಲ್ಲಿ ತಾಲೂಕ ಸಾರ್ವ ಜನಿಕ ಆಸ್ಪತ್ರೆಯ ಮುಖ್ಯ ಆಡಳಿತ ವೈದ್ಯಾಧಿ, ಕಾರಿಯಾದ ಡಾ// ಯುವರಾಜ್ ಬಿರಾದರ್ , ಆರ್ಬಿಟ್ ಸಂಸ್ಥೆಯ ಕಾರ್ಯಕ್ರಮದ ವ್ಯವಸ್ಥಾಪಕಿ ಸಿಸ್ಟರ್ ಕ್ರಿಸ್ಟಿನಾ, ಹಾಗೂ ಸಿಬ್ಬಂದಿ,ಮಾನಸಿಕ ಆರೋಗ್ಯ ಕ್ಷೇತ್ರದ ಸಾಮಾಜ ಕಾರ್ಯಕರ್ತರು, ಫಲಾನುಭವಿ ಗಳು, ಪೋಷಕರು ಸ್ಥಳೀಯ ನಾಗರಿಕರು ಭಾಗವಹಿಸಿ ಕಾರ್ಯ ಕ್ರಮವನ್ನು ಯಶಸ್ವಿ ಗೊಳಿಸಿದರು.

# ಮಾನಸಿಕ ಆರೋಗ್ಯದ ಜಾಗೃತಿ ಮೂಡಿಸಿ

ಬಸವಕಲ್ಯಾಣ: ಮಾನಸಿಕ ಆರೋಗ್ಯದ ಕುರಿತು ಸಮಾಜದಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಅವಶ್ಯಕತೆ ಇದೆ ಎಂದು ಆರ್ಬಿಟ್ ಸಂಸ್ಥೆ ಸಹನಿರ್ದೇಶಕ ಫಾದರ್ ಅಲ್ಬರ್ಟ್ ಹೇಳಿದರು. ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಲಿವ್ ಲವ್ ಲಾಫ್ ಫೌಂಡೇಷನ್ ಮತ್ತು ತಾಲೂಕು ಆರೋಗ್ಯ ಇಲಾಖೆ ಹಾಗೂ ವಿಶೇಷಚೇತನರ ಸಬಲೀಕರಣ ಇಲಾಖೆಗಳ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ವಿಶ್ವ ಮಾನಸಿಕ ಆರೋಗ್ಯ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಮಾನಸಿಕವಾಗಿ ಬಲಿಷ್ಠರಾಗಲು ಸಹಾನುಭೂತಿ ಪ್ರೋತ್ಸಾಹ ಮತ್ತು ಪರಸ್ಪರ ಬೆಂಬಲದ ಮನೋಭಾವವನ್ನು ಬೆಳೆಸಿಕೊಳ್ಳಬೇಕಿದೆ ಎಂದರು. ಮನೋವೈದ್ಯ ಡಾ.ರಿತೇಶ್ ಸುತ್ರಾವೆ ಮಾತನಾಡಿ, ಮಾನಸಿಕ ಆರೋಗ್ಯದ ಮಹತ್ವ ಮತ್ತು ಅದನ್ನು ಕಾಪಾಡಿಕೊಳ್ಳುವ ಮಾರ್ಗ, ಜೀವನದ ಒತ್ತಡ, ಆತಂಕದ ಪರಿಣಾಮಗಳನ್ನು ವಿವರಿಸಿ, ಧ್ಯಾನ ವ್ಯಾಯಾಮ ಮತ್ತು ಸಕರಾತ್ಮಕ ಚಿಂತನೆಯ ಮೂಲಕ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದರು. ಆರೋಗ್ಯಾಧಿಕಾರಿ ಡಾ.ಅಶೋಕ ಮೈಲಾರೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಾರ್ವಜನಿಕ ಆಸ್ಪತ್ರೆಯ ಮುಖ್ಯ ಆಡಳಿತ ವೈದ್ಯಾಧಿಕಾರಿ ಡಾ.ಯುವರಾಜ ಬಿರಾದಾರ, ಆರ್ಬಿಟ್ ಸಂಸ್ಥೆಯ ಕಾರ್ಯಕ್ರಮದ ವ್ಯವಸ್ಥಾಪಕಿ ಸಿಸ್ಟರ್ ಕ್ರಿಸ್ಟಿನಾ ಇತರರಿದ್ದರು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತ ವಿಜಯ ಕುಮಾರ್ ಸ್ವಾಗತಿಸಿದರು. ಮಹಾದೇವ ಮಾನಕಾರೆ ವಂದಿಸಿದರು. ಅನುರಾಧ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಆಯೋಜಿಸಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯನ್ನು ಟಿಎಚ್‌ಒ ಡಾ. ಅಶೋಕ ಮೈಲಾರೆ ಉದ್ಘಾಟಿಸಿದರು. ಫಾದರ್ ಆಲ್ಬರ್ಟ್, ಸಿಎಂಒ ಡಾ.ಯುವರಾಜ ಬಿರಾದಾರ, ಡಾ. ರಿತೇಶ್ ಸುತ್ರಾವೆ, ಸಿಸ್ಟರ್ ಕ್ರಿಸ್ಟಿನಾ ಇದ್ದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

Fr. Victor Anil Vas
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in